# www.karunaduexams.com

ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ ಗ್ರೇಡ್-1 ಪೇಪರ್-2_1-Solved Paper

www.karunaduexams.com

1. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ -1993 (2015 ರಲ್ಲಿ ತಿದ್ದುಪಡಿ) ಕಾಯಿದೆ ಯಾವ ದಿನಾಂಕದಿಂದ ಜಾರಿಗೆ ಬಂದಿದೆ?

ಅ) 20-02-2014

ಆ) 25-02-2015

ಇ) 25-02-2016

ಈ) 28-03-2016

25-02-2016

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993ಕ್ಕೆ ತಿದ್ದುಪಡಿ ತರಲಾಗಿದ್ದು ಮೂಲ ಅಧಿನಿಯಮದ ಹೆಸರನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993 ಶೀರ್ಷಿಕೆ ಬದಲಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್-1993 ಎಂದು ಮರುನಾಮಕರಣ ಮಾಡಲಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್-1993 ಫೆಬ್ರುವರಿ 25, 2016 ರಿಂದ ಜಾರಿಗೆ ಬಂದಿದೆ.

2. ಜನವಸತಿ ಎಂದರೆ ಗ್ರಾಮದ ಪರಿಮಿತಿಯ ಹೊರಗೆ ಇರುವ ______ ಜನಸಂಖ್ಯೆಯುಳ್ಳ ಸಣ್ಣ ವಸತಿ ಪ್ರದೇಶ?

ಅ) ನೂರರಿಂದ ಇನ್ನೂರೈವತ್ತು

ಆ) ಐವತ್ತರಿಂದ ಮೂನ್ನರೈವತ್ತು

ಇ) ನೂರರಿಂದ ಮೂನ್ನರೈವತ್ತು

ಈ) ನೂರರಿಂದ ನಾಲ್ಕುನೂರು

ನೂರರಿಂದ ಮೂನ್ನರೈವತ್ತು

ಜನವಸತಿ ಎಂದರೆ ಗ್ರಾಮದ ಪರಿಮಿತಿಯ ಹೊರಗೆ ಇರುವ ನೂರರಿಂದ ಮೂನ್ನರೈವತ್ತು ಜನಸಂಖ್ಯೆಯುಳ್ಳ ಸಣ್ಣ ಪ್ರದೇಶ.

3. ಪಂಚಾಯತ್ ನೀತಿ ನಿರ್ದೇಶಕ ತತ್ವಗಳನ್ನು ಪಂಚಾಯತ್ ರಾಜ್ ಅಧಿನಿಯಮದ ಯಾವ ಅಧ್ಯಾಯನದಲ್ಲಿ ನೀಡಲಾಗಿದೆ?

ಅ) ಅಧ್ಯಾಯ I

ಆ ಅಧ್ಯಾಯ II

ಇ) ಅಧ್ಯಾಯ Iಎ

ಈ) ಅಧ್ಯಾಯ II ಎ

ಅಧ್ಯಾಯ Iಎ

www.karunaduexams.com

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993ರ ಅಧ್ಯಾಯ 1 ಕ್ಕೆ ತಿದ್ದುಪಡಿ ತಂದು ಅಧ್ಯಾಯ1ಎ ಯನ್ನು ಸೇರ್ಪಡೆಗೊಳಿಸಲಾಗಿದೆ. ಅಧ್ಯಾಯ1ಎ ಯಡಿ ಪಂಚಾಯತ್ ನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಲಾಗಿದೆ.

4. ಪಂಚಾಯತ್ ನೀತಿ ನಿರ್ದೇಶಕ ತತ್ವಗಳಲ್ಲಿ ಎಷ್ಟು ತತ್ವಗಳನ್ನು ಅಳವಡಿಸಲಾಗಿದೆ?

ಅ) ಏಳು

ಆ) ಒಂಬತ್ತು

ಇ) ಹತ್ತು

ಈ) ಹನ್ನೊಂದು

ಹತ್ತು

5. ಈ ಕೆಳಗಿನವುಗಳನ್ನು ಗಮನಿಸಿ:

I) ರೋಗಗ್ರಸ್ಥರು ಮತ್ತು ಅಶಕ್ತರು

II) ಅಸಮರ್ಥರು ಮತ್ತು ವಿಕಲಚೇತನರು

III) ಜೀತ ಕಾರ್ಮಿಕರು ಮತ್ತು ಅಲೆಮಾರಿಗಳು

IV) ಬುಡಕಟ್ಟು ಸಮೂಹ ಮತ್ತು ವಲಸೆ ಕಾರ್ಮಿಕರು

V) ಮಕ್ಕಳು, ಹಿರಿಯ ನಾಗರೀಕರು ಮತ್ತು ಮಹಿಳೆಯರು

ಈ ಮೇಲಿನ ಯಾರು ಸಮಾಜದ ಸುರಕ್ಷಿತವಲ್ಲದ ವರ್ಗಗಳಾಗಿದ್ದಾರೆ?

ಅ) I, II, III & IV

ಆ) II, III, IV & V

ಇ) II, IV & V

ಈ) I, II, III, IV & V

I, II, III, IV & V

ಮೇಲಿನ ಎಲ್ಲರು ಸಮಾಜದ ಸುರಕ್ಷಿತವಲ್ಲದ ವರ್ಗಗಳಾಗಿವೆ.

6. ಗ್ರಾಮ ಸ್ವರಾಜ್ ಘಟಕಗಳ ಬಗ್ಗೆ ವಿವರಣೆ ನೀಡುವ ಪ್ರಕರಣ ಯಾವುದು?

ಅ) ಪ್ರಕರಣ 2

ಆ) ಪ್ರಕರಣ 3

ಇ) ಪ್ರಕರಣ 4

ಈ) ಪ್ರಕರಣ 3ಎ

ಪ್ರಕರಣ 3

www.karunaduexams.com

ಪ್ರಕರಣ 3 ಗ್ರಾಮ ಸ್ವರಾಜ್ ಘಟಕಗಳಿಗೆ ಸಂಬಂಧಿಸಿದೆ. ಮೂಲ ಅಧಿನಿಯಮದ 3ನೇ ಪ್ರಕರಣಕ್ಕೆ ತಿದ್ದುಪಡಿ ತರಲಾಗಿದ್ದು ಗ್ರಾಮ ಸ್ವರಾಜ್ ಘಟಕಗಳನ್ನು ಸೇರಿಸಲಾಗಿದೆ. ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾಗಳು ಗ್ರಾಮ ಸ್ವರಾಜ್ ಘಟಕಗಳಾಗಿವೆ.

7. ಯಾವುದೇ ಒಂದು ಗ್ರಾಮ ಪಂಚಾಯತಿಯಲ್ಲಿ ವಾರ್ಡ್ ಸಭಾಗಳ ಸಂಖ್ಯೆ ಇವುಗಳ ಅನುಗುಣವಾಗಿ ಇರತಕ್ಕದ್ದು ____?

ಅ) ಪಂಚಾಯತಿಯ ಜನಸಂಖ್ಯೆ

ಆ) ಪಂಚಾಯತಿಯಲ್ಲಿರುವ ವಾರ್ಡ್ ಗಳಷ್ಟು

ಇ) ಗ್ರಾಮ ಪಂಚಾಯತಿ ನಿರ್ಣಯಿಸಿದಷ್ಟು

ಈ) ಪಂಚಾಯತಿ ವಿಸ್ತೀರ್ಣಕ್ಕೆ ಒಳಪಟ್ಟು

ಪಂಚಾಯತಿಯಲ್ಲಿರುವ ವಾರ್ಡ್ ಗಳಷ್ಟು

ಯಾವುದೇ ಒಂದು ಗ್ರಾಮ ಪಂಚಾಯತಿಯಲ್ಲಿ ವಾರ್ಡ್ ಸಭಾಗಳ ಸಂಖ್ಯೆ ಆ ಪಂಚಾಯತಿಯಲ್ಲಿರುವ ವಾರ್ಡ್ ಗಳಷ್ಟು ಇರತಕ್ಕದ್ದು.

8. ಜನವಸತಿ ಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ವಿವರಿಸುವ ಪ್ರಕರಣ ಯಾವುದು?

ಅ) ಪ್ರಕರಣ 4ಎ

ಆ) ಪ್ರಕರಣ 3ಎ

ಇ) ಪ್ರಕರಣ 3ಬಿ

ಈ) ಪ್ರಕರಣ 3ಇ

ಪ್ರಕರಣ 3ಎ

ಪ್ರಕರಣ3ಎ ಜನವಸತಿ ಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ವಿವರಿಸುತ್ತದೆ. ಮೂಲ ಕಾಯಿದೆಯಲ್ಲಿ ಪ್ರಕರಣ 3ಎ ಗ್ರಾಮ ಸಭೆಗೆ ಸಂಬಂಧಿಸಿತ್ತು.

9. ತಪ್ಪಾಗಿ ಹೊಂದಾಣಿಕೆಯಾಗಿರುವುದನ್ನು ಗುರುತಿಸಿ:

ಅ) ಜನವಸತಿ ಸಭಾದ ಸಭೆಗಳು – 3ಬಿ

ಆ) ವಾರ್ಡ್ ಸಭಾ – 3ಸಿ

ಇ) ವಾರ್ಡ್ ಸಭಾದ ಸಭೆಗಳು – 3ಡಿ

ಈ) ಗ್ರಾಮ ಸಭೆ – 3ಎಫ್

ಗ್ರಾಮ ಸಭೆ – 3ಇ

ಈ ಪ್ರಕರಣಗಳನ್ನು ನೆನಪಿನಲ್ಲಿಡಿ: ಪ್ರಕರಣ 3-ಗ್ರಾಮ ಸ್ವರಾಜ್ ಘಟಕಗಳು, ಪ್ರಕರಣ 3ಎ - ಜನವಸತಿ ಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳು, ಪ್ರಕರಣ 3ಬಿ-ಜನವಸತಿ ಸಭಾದ



www.karunaduexams.com

ಸಭೆಗಳು, 3ಸಿ - ವಾರ್ಡ್ ಸಭಾ, 3ಡಿ - ವಾರ್ಡ್ ಸಭಾದ ಸಭೆಗಳು, ಪ್ರಕರಣ 3ಇ – ಗ್ರಾಮ ಸಭೆ, ಪ್ರಕರಣ 3ಎಫ್ – ಗ್ರಾಮ ಸಭಾದ ಕರ್ತವ್ಯಗಳು, ಪ್ರಕರಣ 3ಜಿ – ಗ್ರಾಮಸಭಾದ ಸಭೆಗಳು ಮತ್ತು ಪ್ರಕರಣ 3ಹೆಚ್ – ಗ್ರಾಮ ಸಭಾದ ವಿಶೇಷ ಸಭೆ.

10. ಜನವಸತಿಗೆ ಸಭಾಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ತಪ್ಪಾದ ಹೇಳಿಕೆ ಯಾವುದು?

ಅ) ಜನವಸತಿ ಸಭೆ ಕನಿಷ್ಠ ಆರು ತಿಂಗಳಿಗೊಮ್ಮೆ ಸೇರಬೇಕು

ಆ) ಗ್ರಾಮ ಸಭಾದ ಸಭೆ ಸೇರುವ ಕನಿಷ್ಠ ಒಂದು ತಿಂಗಳು ಮೊದಲ ಸಭೆ ಸೇರಬೇಕು

ಇ) ಮೂರು ತಿಂಗಳ ಅವಧಿಗೆ ಎರಡು ವಿಶೇಷ ಜನವಸತಿ ಸಭೆ ಕರೆಯತಕ್ಕದಲ್ಲ

ಈ) ಜನವಸತಿ ಸಭೆ ಕರೆಯಲು ವಿಫಲನಾದ ಸದಸ್ಯನು ಪಂಚಾಯತಿಗೆ ರೂ 100 ದಂಡ ಕಟ್ಟಬೇಕು

ಜನವಸತಿ ಸಭೆ ಕರೆಯಲು ವಿಫಲನಾದ ಸದಸ್ಯನು ಪಂಚಾಯತಿಗೆ ರೂ 100 ದಂಡ ಕಟ್ಟಬೇಕು. ಜನವಸತಿ ಸಭೆ ಕರೆಯಲು ವಿಫಲನಾದ ಸದಸ್ಯನು ಯಾವುದೇ ದಂಡವನ್ನು ಕಟ್ಟಬೇಕಿಲ್ಲ.

11. ಜನವಸತಿ ಮತ್ತು ವಾರ್ಡ್ ಸಭಾದ ಸಭೆ ನಡೆಸಲು ಬೇಕಾದ ಕೋರಂ _____?

ಅ) ಒಟ್ಟು ಮತದಾರರ ಪೈಕಿ ಐದನೇ ಒಂದರಷ್ಟು ಅಥವಾ ಮೂವತ್ತು ಸದಸ್ಯರು

ಆ) ಒಟ್ಟು ಮತದಾರರ ಪೈಕಿ ಐದನೇ ಒಂದರಷ್ಟು ಅಥವಾ ಇಪ್ಪತ್ತು ಸದಸ್ಯರು

ಇ) ಒಟ್ಟು ಮತದಾರರ ಪೈಕಿ ಐದನೇ ಒಂದರಷ್ಟು ಅಥವಾ ನಲವತ್ತು ಸದಸ್ಯರು

ಈ) ಒಟ್ಟು ಮತದಾರರ ಪೈಕಿ ನಾಲ್ಕನೇ ಒಂದರಷ್ಟು ಅಥವಾ ಇಪ್ಪತ್ತು ಸದಸ್ಯರು

ಒಟ್ಟು ಮತದಾರರ ಪೈಕಿ ಐದನೇ ಒಂದರಷ್ಟು ಅಥವಾ ಇಪ್ಪತ್ತು ಸದಸ್ಯರು

ಜನವಸತಿ ಮತ್ತು ವಾರ್ಡ್ ಸಭಾದ ಸಭೆ ಎರಡಕ್ಕೂ ಕೋರಂ ಒಂದೇ. ಒಟ್ಟು ಮತದಾರರ ಪೈಕಿ ಐದನೇ ಒಂದರಷ್ಟು ಅಥವಾ ಇಪ್ಪತ್ತು ಸದಸ್ಯರುಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸದಸ್ಯರು ಈ ಸಭೆಗಳಿಗೆ ಕೋರಂ ಆಗಿರತಕ್ಕದ್ದು.ಈ ಪೈಕಿ ಕನಿಷ್ಠ ಪಕ್ಷ ಶೇಕಡಾ ಮೂವತ್ತರಷ್ಟು ಮಹಿಳೆಯರು ಇರತಕ್ಕದ್ದು ಮತ್ತು ಅನುಸೂಚಿತ ಜಾತಿ/ಪಂಗಡದ ವ್ಯಕ್ತಿಗಳು ಅವರ ಜನಸಂಖ್ಯೆಯ ಅನುಗುಣವಾದ ಪ್ರಮಾಣದಲ್ಲಿ ಇರತಕ್ಕದ್ದು.

12. ವಾರ್ಡ್ ಸಭೆಯನ್ನು ಕರೆಯಬೇಕಾದ ಕರೆಯುವುದಕ್ಕೆ ಅಥವಾ ಅಧ್ಯಕ್ಷತೆ ವಹಿಸಲು ವಿಫಲನಾದ ಸದಸ್ಯನು ಎಷ್ಟು ರೂ ಗಳನ್ನು ಪಂಚಾಯತಿಗೆ ಸಂದಾಯ ಮಾಡಬೇಕು?

ಅ) ರೂ 100

ಆ) ರೂ 200

ಇ) ರೂ 500

www.karunaduexams.com

ಈ) ರೂ 1000

ರೂ 100

ವಾರ್ಡ್ ಸಭೆಯನ್ನು ಕರೆಯಬೇಕಾದ ಕರೆಯುವುದಕ್ಕೆ ಅಥವಾ ಅಧ್ಯಕ್ಷತೆ ವಹಿಸಲು ವಿಫಲನಾದ ಸದಸ್ಯನು ಗ್ರಾಮ ಪಂಚಾಯತಿ ನಿಧಿಗೆ ಒಂದು ನೂರು ರೂಪಾಯಿಗಳನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು ಮತ್ತು ಅಂಥ ವಿಫಲತೆಗೆ ವಿವರಣೆಯನ್ನು ನೀಡತಕ್ಕದ್ದು.

13. ಜನವಸತಿ ಮತ್ತು ವಾರ್ಡ್ ಸಭಾದ ವಿಶೇಷ ಸಭೆಗಳನ್ನು ಕರೆಯಬೇಕೆಂದರೆ ಆಯಾ ಜನವಸತಿ/ವಾರ್ಡ್ ನ ಕನಿಷ್ಠ ಪಕ್ಷ ____ ರಷ್ಟು ಮತದಾರರು ಲಿಖಿತವಾಗಿ ಮನವಿ ಸಲ್ಲಿಸಬೇಕು?

ಅ) ಶೇ 15

ಆ) ಶೇ 10

ಇ) ಶೇ 20

ಈ) ಶೇ 25

ಶೇ 10

ಕನಿಷ್ಠ ಪಕ್ಷ ಶೇಕಡಾ ಹತ್ತರಷ್ಟು ಮತದಾರರು ಲಿಖಿತದಲ್ಲಿ ಮನವಿ ಸಲ್ಲಿಸಿದಾಗ ಮತ್ತು ನಿರ್ದಿಷ್ಟಪಡಿಸಿದಾಗ ವಿಶೇಷ ಜನವಸತಿ ಮತ್ತು ವಾರ್ಡ್ ಸಭಾದ ಸಭೆಯನ್ನು ಕರೆಯಬಹುದು.

14. ಪಂಚಾಯತ್ ರಾಜ್ ಅಧಿನಿಯಮದ ಯಾವ ಪ್ರಕರಣದಡಿ ಗ್ರಾಮ ಸಭೆಯ ಕರ್ತವ್ಯಗಳ ಬಗ್ಗೆ ತಿಳಿಸಲಾಗಿದೆ?

ಅ) ಪ್ರಕರಣ 3ಡಿ

ಆ) ಪ್ರಕರಣ 3ಇ

ಇ) ಪ್ರಕರಣ 3ಎಫ್

ಈ) ಪ್ರಕರಣ 3 ಜಿ

ಪ್ರಕರಣ 3ಎಫ್

ಪ್ರಕರಣ 3ಎಫ್ – ಗ್ರಾಮ ಸಭಾದ ಕರ್ತವ್ಯಗಳಿಗೆ ಸಂಬಂಧಿಸಿದೆ.

15. ಗ್ರಾಮ ಪಂಚಾಯತಿಯ ಅಧ್ಯಕ್ಷನು ಎಲ್ಲಾ ಗ್ರಾಮ ಸಭಾಗಳ ಮೊದಲ ಸಭೆಯನ್ನು ಎಷ್ಟು ದಿನಗಳ ಒಳಗೆ ಕರೆಯತಕ್ಕದ್ದು?

ಅ) 30

ಆ) 45

www.karunaduexams.com

ಇ) 60

ಈ) 90

60

ಗ್ರಾಮ ಪಂಚಾಯತಿಯ ಅಧ್ಯಕ್ಷನು ಎಲ್ಲಾ ಗ್ರಾಮ ಸಭಾಗಳ ಮೊದಲ ಸಭೆಯನ್ನು 60 ದಿನಗಳ ಒಳಗೆ ಕರೆಯತಕ್ಕದ್ದು ಮತ್ತು ತದನಂತರ ಸಭೆಯನ್ನು ಗ್ರಾಮಸಭೆಯು ನಿರ್ಧರಿಸಿದ ದಿನಾಂಕದಂದು ಕರೆಯತಕ್ಕದ್ದು. ಈ ಎರಡು ಸಭೆಗಳ ಅಂತರ ಆರು ತಿಂಗಳು ಮೀರದಂತೆ ಇರತಕ್ಕದ್ದು.

16. ಗ್ರಾಮ ಪಂಚಾಯತಿ ಅಧ್ಯಕ್ಷನು ಗ್ರಾಮ ಸಭಾದ ಸಭೆಯನ್ನು ಕರೆಯಲು ವಿಫಲನಾದರೆ ರೂ _____ ಅನ್ನು ಪಂಚಾಯತಿಗೆ ಸಂದಾಯ ಮಾಡಬೇಕು?

ಅ) ರೂ 500

ಆ) ರೂ 1000

ಇ) ರೂ 1500

ಈ) ರೂ 2000

ರೂ 1000

ಗ್ರಾಮ ಪಂಚಾಯತಿ ಅಧ್ಯಕ್ಷನು ಗ್ರಾಮ ಸಭಾದ ಸಭೆಯನ್ನು ಕರೆಯಲು ವಿಫಲನಾದರೆ ರೂ 1000 ಅನ್ನು ಗ್ರಾಮ ಪಂಚಾಯತಿ ನಿಧಿಗೆ ಸಂದಾಯ ಮಾಡಬೇಕು ಮತ್ತು ಸಭೆ ಕರೆಯಲು ವಿಫಲನಾಗಿದ್ದಕ್ಕೆ ಇರುವ ಕಾರಣವನ್ನು ಗ್ರಾಮಸಭಾದ ಮುಂದಿನ ಸಭೆಯಲ್ಲಿ ತಿಳಿಸಬೇಕು.

17. ಗ್ರಾಮ ಪಂಚಾಯತ್ ನ ಯೋಜನೆಗಳನ್ನು ಮತ್ತು ಹಣಕಾಸು ವಿಷಯಗಳನ್ನು ಪರಿಶೀಲಿಸಲು ವರ್ಷದಲ್ಲಿ ಎಷ್ಟು ಬಾರಿ ಗ್ರಾಮಸಭಾದ ವಿಶೇಷ ಆಯವ್ಯಯ ಸಭೆಗಳನ್ನು ಕರೆಯಬೇಕು?

ಅ) ಒಂದು

ಆ) ಎರಡು

ಇ) ಮೂರು

ಈ) ನಾಲ್ಕು

ಎರಡು

ಗ್ರಾಮ ಪಂಚಾಯತ್ ನ ಯೋಜನೆಗಳನ್ನು ಮತ್ತು ಹಣಕಾಸು ವಿಷಯಗಳನ್ನು ಪರಿಶೀಲಿಸಲು ವರ್ಷದಲ್ಲಿ ಕನಿಷ್ಠ ಎರಡು ಬಾರಿ ಗ್ರಾಮಸಭಾದ ವಿಶೇಷ ಆಯವ್ಯಯ ಸಭೆಗಳನ್ನು ಕರೆಯಬೇಕು.

www.karunaduexams.com

18. ಜಿಲ್ಲಾಧಿಕಾರಿಗಳು ಯಾವುದೇ ಗ್ರಾಮ ಅಥವಾ ಗ್ರಾಮಗಳ ಗುಂಪನ್ನು ಪಂಚಾಯತಿ ಎಂದು ಘೋಷಿಸಲು ಇರಬೇಕಾದ ಜನಸಂಖ್ಯೆ ಮಿತಿ ____?

ಅ) 5000-7000

ಆ) 5000-8000

ಇ) 4000-8000

ಈ) 5000-10000

5000-7000

19. ಪ್ರತಿ ಎಷ್ಟು ಜನಸಂಖ್ಯೆಗೆ ಒಬ್ಬರಂತೆ ಗ್ರಾಮ ಪಂಚಾಯತಿಯು ಚುನಾಯಿತ ಸದಸ್ಯರನ್ನು ಹೊಂದಿರಬೇಕು?

ಅ) 200

ಆ) 400

ಇ) 500

ಈ) 600

400

ಪ್ರತಿ 400ಕ್ಕೂ ಜನರಿಗೆ ಒಬ್ಬ ಗ್ರಾಮ ಪಂಚಾಯತಿ ಸದಸ್ಯನನ್ನು ಗ್ರಾಮ ಪಂಚಾಯತಿ ಹೊಂದಿರುತ್ತದೆ.

20. ರಾಜ್ಯದಲ್ಲಿ ಪಂಚಾಯತಿ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇ% ___ ರಷ್ಟು ಮೀಸಲಾತಿ ಕಲ್ಪಿಸಲಾಗಿದೆ?

ಅ) ಶೇ 33%

ಆ) ಶೇ 50%

ಇ) ಶೇ 49%

ಈ) ಶೇ 40%

ಶೇ 50%

ರಾಜ್ಯದಲ್ಲಿ ಪಂಚಾಯತಿ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇ 50% ರಷ್ಟು ಮೀಸಲಾಯಿ ಕಲ್ಪಿಸಲಾಗಿದೆ.

21. ಗ್ರಾಮ ಪಂಚಾಯತಿಗಳ ಸದಸ್ಯರನ್ನು ಚುನಾಯಿಸಲು ತಪ್ಪಿದ್ದಲ್ಲಿ ಜಿಲ್ಲಾಧಿಕಾರಿಯವರು ಆಡಳಿತಾಧಿಕಾರಿಯನ್ನು ಎಷ್ಟು ತಿಂಗಳ ಅವಧಿಗೆ ಮೀರದಂತೆ ನೇಮಕ ಮಾಡಬಹುದು?

ಅ) ಮೂರು

ಆ) ನಾಲ್ಕು

www.karunaduexams.com

ಇ) ಐದು

ಈ) ಆರು

ಆರು

22. ಗ್ರಾಮ ಪಂಚಾಯತಿ ಚುನಾವಣಾ ಕ್ಷೇತ್ರಕ್ಕಾಗಿ ಮತದಾರರ ಪಟ್ಟಿಯನ್ನು ತಯಾರಿಸುವವರು ಯಾರು?

ಅ) ಜಿಲ್ಲಾಧಿಕಾರಿ

ಆ) ಉಪ-ವಿಭಾಗಧಿಕಾರಿ

ಇ) ತಹಶೀಲ್ದಾರ್

ಈ) ಕಾರ್ಯನಿರ್ವಾಹಣಾಧಿಕಾರಿ

ತಹಶೀಲ್ದಾರ್

23. ಚುನಾಯಿತ ಸದಸ್ಯರು ಮತ್ತು ಅವರು ರಾಜೀನಾಮೆ ಯಾರಿಗೆ ನೀಡಬೇಕು ಸರಿಯಾಗಿ ಹೊಂದಾಣಿಕೆ ಆಗಿಲ್ಲ?

ಅ) ಗ್ರಾಮ ಪಂಚಾಯತಿ ಅಧ್ಯಕ್ಷ - ಉಪವಿಭಾಗಧಿಕಾರಿ

ಆ) ಗ್ರಾಮ ಪಂಚಾಯತಿ ಉಪಾಧ್ಯಕ್ಷ – ಪಂಚಾಯತಿ ಅಧ್ಯಕ್ಷ

ಇ) ತಾಲ್ಲೂಕ್ ಪಂಚಾಯತ್ ಅಧ್ಯಕ್ಷ - ಉಪವಿಭಾಗಧಿಕಾರಿ

ಈ) ಜಿಲ್ಲಾ ಪಂಚಾಯತಿ ಅಧ್ಯಕ್ಷ – ಸರ್ಕಾರಕ್ಕೆ

ತಾಲ್ಲೂಕ್ ಪಂಚಾಯತ್ ಅಧ್ಯಕ್ಷ – ಉಪವಿಭಾಗಧಿಕಾರಿ

ತಾಲ್ಲೂಕ್ ಪಂಚಾಯತ್ ಅಧ್ಯಕ್ಷ ಜಿಲ್ಲಾಧಿಕಾರಿಗಳಿಗೆ ತಮ್ಮ ರಾಜೀನಾಮೆಯನ್ನು ನೀಡತಕ್ಕದ್ದು.

24. ಈ ಕೆಳಗಿನ ಯಾವ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರನ್ನು ತೆಗೆದುಹಾಕಲು ಸಾಧ್ಯವಿಲ್ಲ?

ಅ) ದುನರ್ಡತೆ ತಪ್ಪಿತಸ್ಥನಾದಾಗ

ಆ) ವೈದ್ಯಕೀಯವಾಗಿ ಅಸಮರ್ಥನಾದಾಗ

ಇ) ಶೌಚಾಲಯ ಹೊಂದಿರದಿದ್ದಾಗ

ಈ) ದಿವಾಳಿ ಅಥವಾ ಅಸ್ವಸ್ಥಚಿತ್ತದವನಾದಾಗ

ಶೌಚಾಲಯ ಹೊಂದಿರದಿದ್ದಾಗ

25. ಗ್ರಾಮ ಪಂಚಾಯತಿಯ ಸದಸ್ಯರನ್ನು ತೆಗೆದುಹಾಕುವ ವಿವರಣೆಯನ್ನು ಯಾವ ಪ್ರಕರಣದಡಿ ನೀಡಲಾಗಿದೆ?

www.karunadueexams.com

ಅ) ಪ್ರಕರಣ 43

ಆ) ಪ್ರಕರಣ 43 ಎ

ಇ) ಪ್ರಕರಣ 45

ಈ) ಪ್ರಕರಣ 44

ಪ್ರಕರಣ 43 ಎ

26. ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಬ್ಬರು ಇಲ್ಲದಿದ್ದಾಗ ಯಾವ ಸ್ಥಾಯಿ ಸಮಿತಿಯ ಅಧ್ಯಕ್ಷರು ಪಂಚಾಯತಿಯ ಅಧ್ಯಕ್ಷರಾಗಿ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ?

ಅ) ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಆ) ಸಾಮಾನ್ಯ ಸ್ಥಾಯಿ ಸಮಿತಿ

ಇ) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ

ಈ) ಆಹಾರ ಖಾತರಿ ಸಮಿತಿ

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

27. ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧವಾಗಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಚುನಾಯಿತ ದಿನಾಂಕದಿಂದ ಎಷ್ಟು ಅವಧಿಯೊಳಗೆ ಮಂಡಿಸತಕ್ಕದ್ದಲ್ಲ?

ಅ) ಒಂದು ವರ್ಷ

ಆ) ಎರಡು ವರ್ಷ

ಇ) ಎರಡುವರೆ ವರ್ಷ

ಈ)ಮೂರು ವರ್ಷ

ಎರಡುವರೆ ವರ್ಷ

ಮೂಲ ಕಾಯಿದೆಯಲ್ಲಿ ಹುದ್ದೆಯನ್ನು ವಹಿಸಿಕೊಂಡ ದಿನಾಂಕದಿಂದ ಒಂದು ವರ್ಷ ಎಂದಿತ್ತು. ತಿದ್ದುಪಡಿ ತಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧವಾಗಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಚುನಾಯಿತ ದಿನಾಂಕದಿಂದ ಎರಡುವರೆ ವರ್ಷ ಆಗಿರಬೇಕು.

28. ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧವಾಗಿ ಅವಿಶ್ವಾಸ ಸೂಚಿಸುವ ಪ್ರಕರಣ ____?

ಅ) ಪ್ರಕರಣ 45

ಆ) ಪ್ರಕರಣ 47

ಇ) ಪ್ರಕರಣ 49

ಈ) ಪ್ರಕರಣ 50

www.karunaduexams.com

ಪ್ರಕರಣ 49

29. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಲ್ಲದ ಹೇಳಿಕೆಯನ್ನು ಗುರುತಿಸಿ:
ಅ) ಗ್ರಾಮ ಪಂಚಾಯತಿ ಅಧ್ಯಕ್ಷರು ಪಂಚಾಯತಿ ಸಾಮಾನ್ಯ ಸಭೆಯನ್ನು ಕರೆಯಬೇಕು
ಆ) ಕನಿಷ್ಠ ಪಕ್ಷ ಪ್ರತಿ ತಿಂಗಳಿಗೊಮ್ಮೆ ಸಾಮಾನ್ಯ ಸಭೆಯನ್ನು ನಡೆಸಬೇಕು
ಇ) ಸಾಮಾನ್ಯ ಸಭೆಯ ಬಗ್ಗೆ ಹತ್ತು ದಿನಗಳ ಮುಂಚಿತವಾಗಿ ನೋಟಿಸ್ ನೀಡಬೇಕು
ಈ) ಸಭೆಯ ಕೋರಂ ಸದಸ್ಯರ ಒಟ್ಟು ಸಂಖ್ಯೆಯ ಅರ್ಧದಷ್ಟು ಇರಬೇಕು
ಸಾಮಾನ್ಯ ಸಭೆಯ ಬಗ್ಗೆ ಹತ್ತು ದಿನಗಳ ಮುಂಚಿತವಾಗಿ ನೋಟಿಸ್ ನೀಡಬೇಕು
ಸಾಮಾನ್ಯ ಸಭೆಯ ಬಗ್ಗೆ ಏಳು ದಿನಗಳ ಮುಂಚಿತವಾಗಿ ನೋಟಿಸ್ ನೀಡತಕ್ಕದ್ದು. ಉಳಿದಂತೆ ಮೇಲಿನ ಎಲ್ಲಾ ಹೇಳಿಕೆಗಳು ಸರಿಯಿವೆ.

30. ಗ್ರಾಮ ಪಂಚಾಯತಿ ಯಾವುದೇ ಸಭೆ (ಜನವಸತಿ, ವಾರ್ಡ್, ಗ್ರಾಮ ಮತ್ತು ಸಾಮಾನ್ಯ ಸಭೆ) ಕೋರಂ ಇಲ್ಲದ ವೇಳೆ ಎಷ್ಟು ನಿಮಿಷಗಳ ಕಾಲ ಕಾಯತಕ್ಕದ್ದು?
ಅ) ಮೂವತ್ತು ನಿಮಿಷ
ಆ) ಇಪ್ಪತ್ತು ನಿಮಿಷ
ಇ) ಅರವತ್ತು ನಿಮಿಷ
ಈ) ನಲವತ್ತೈದು ನಿಮಿಷ
ಮೂವತ್ತು ನಿಮಿಷ

31. ಗ್ರಾಮ ಪಂಚಾಯತಿಯ ಯಾವುದೇ ನಿರ್ಣಯವನ್ನು ಅಂಗೀಕರಣಗೊಂಡ ಬಳಿಕೆ ಎಷ್ಟು ತಿಂಗಳೊಳಗೆ ಮಾರ್ಪಾಟು ಮಾಡಲು ಅವಕಾಶವಿಲ್ಲ?
ಅ) ಮೂರು
ಆ) ನಾಲ್ಕು
ಇ) ಆರು
ಈ) ಹನ್ನೆರಡು
ಆರು

32. ಗ್ರಾಮ ಪಂಚಾಯತಿ ಸಭೆಯಲ್ಲಿ ಕೈಗೊಳ್ಳುವ ನಿರ್ಣಯವನ್ನು ಸಭೆಯ ದಿನಾಂಕದಿಂದ ಎಷ್ಟು ದಿನದೊಳಗೆ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸಲ್ಲಿಸಬೇಕು?
ಅ) 14
ಆ) 10
ಇ) 24

www.karunaduexams.com

ಈ) 26

10

33. ಗ್ರಾಮ ಪಂಚಾಯತಿಯಲ್ಲಿ ಅಗತ್ಯವೆನಿಸಿದಾದ ವಿಶೇಷ ಸಭೆಯನ್ನು ಎಷ್ಟು ದಿನಗಳಿಗೊಮ್ಮೆ ಕರೆಯಬಹುದು?

ಅ) 10

ಆ) 12

ಇ) 15

ಈ) 20

15

34. ಗ್ರಾಮ ಪಂಚಾಯತಿಗೆ ಚುನಾಯಿಸಲು ಬೇಕಾದ ಕನಿಷ್ಠ ವಿದ್ಯಾ ಅರ್ಹತೆ ___?

ಅ) ಏಳನೇ ತರಗತಿ

ಆ) ಎಂಟನೇ ತರಗತಿ

ಇ) ಎಸ್.ಎಸ್.ಎಲ್.ಸಿ

ಈ) ವಿದ್ಯಾ ಅರ್ಹತೆ ಬೇಕಿಲ್ಲ

ವಿದ್ಯಾ ಅರ್ಹತೆ ಬೇಕಿಲ್ಲ

35. ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಧಾರವಾಡ, ಬೆಳಗಾವಿ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ________ ಜನಸಂಖ್ಯೆಯುಳ್ಳ ಪ್ರದೇಶವನ್ನು ಪಂಚಾಯತಿ ಪ್ರದೇಶವೆಂದು ಘೋಷಿಸಬಹುದು?

ಅ) 2500 ಕಡಿಮೆ ಇಲ್ಲದಷ್ಟು

ಆ) 3000 ಕಡಿಮೆ ಇಲ್ಲದಷ್ಟು

ಇ) 4000 ಕಡಿಮೆ ಇಲ್ಲದಷ್ಟು

ಈ) 2000 ಕಡಿಮೆ ಇಲ್ಲದಷ್ಟು

2500 ಕಡಿಮೆ ಇಲ್ಲದಷ್ಟು

36. ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ನಡೆಸಬೇಕಾದ ಎಷ್ಟು ಸಭೆಗಳನ್ನ ಸತತವಾಗಿ ನಡೆಸದಿದ್ದಾರೆ ಅನರ್ಹಗೊಳಿಸಬಹುದಾಗಿದೆ?

ಅ) ಎರಡು

ಆ) ಮೂರು

www.karunaduexams.com

ಇ) ನಾಲ್ಕು

ಈ) ಮೇಲಿನ ಯಾವುದು ಅಲ್ಲ

ಎರಡು

ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸಭೆಯನ್ನು ಕರೆಯಬೇಕಿದ್ದಾಗ ಅಥವಾ ಅಗತ್ಯವಾಗಿದ್ದಾಗ ಒಂದಾದ ಮೇಲೊಂದರಂತೆ ನಡೆಯಬೇಕಾದ ಎರಡು ಸಭೆಗಳನ್ನು ಕರೆಯಲು ವಿಫಲನಾದರೆ ಅನರ್ಹಗೊಳಿಸಬಹುದು.

37. ಗ್ರಾಮ ಪಂಚಾಯತಿಯ ಪ್ರಕಾರ್ಯಗಳನ್ನು ವಿವರಿಸುವ ಪ್ರಕರಣ ______?

ಅ) ಪ್ರಕರಣ 56

ಆ) ಪ್ರಕರಣ 57

ಇ) ಪ್ರಕರಣ 58

ಈ) ಪ್ರಕರಣ 59

ಪ್ರಕರಣ 58

ಅಧ್ಯಾಯ IV ಪ್ರಕರಣ 58ರಡಿ ಗ್ರಾಮ ಪಂಚಾಯತಿ ಪ್ರಕಾರ್ಯಗಳ ಬಗ್ಗೆ ತಿಳಿಸಲಾಗಿದೆ

38. ಪ್ರತಿ ವರ್ಷ _________ರಷ್ಟು ಮನೆಗಳಿಗೆ ಕಡಿಮೆ ಇಲ್ಲದಷ್ಟು ಶೌಚಾಲಯಗಳನ್ನು ಒದಗಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ?

ಅ) ಶೇ 8%

ಆ) ಶೇ 10%

ಇ) ಶೇ 15%

ಈ) ಶೇ 20%

ಶೇ 10%

ಗ್ರಾಮ ಪಂಚಾಯತಿಯು ಪ್ರತಿ ವರ್ಷ ಶೇ 10 ರಷ್ಟು ಮನೆಗಳಿಗೆ ಕಡಿಮೆ ಇಲ್ಲದಷ್ಟು ಶೌಚಗೃಹಗಳನ್ನು ಒದಗಿಸಬೇಕು.

39. ________ಪ್ರಕರಣದಡಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿದೆ?

ಅ) ಪ್ರಕರಣ 58 ಬಿ

ಆ) ಪ್ರಕರಣ 58 ಎ

ಇ) ಪ್ರಕರಣ 58 ಸಿ

ಈ) ಪ್ರಕರಣ 58 ಡಿ

ಪ್ರಕರಣ 58 ಸಿ

www.karunaduexams.com

ಪ್ರಕರಣ 58ಸಿ ಯಡಿ ಮಹಿಳೆಯರಿಗೆ ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿದೆ. ಅದರಂತೆ ಗ್ರಾಮ ಪಂಚಾಯತಿ ಪ್ರದೇಶದ ಒಳಗಿರುವ ಕೆಲಸಗಳ ಸ್ಥಳಗಳಲ್ಲಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಇತರೆ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಮೇಲಾಗುವು ಲೈಂಗಿಕ ಕಿರುಕುಳವನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿ ಮಾಡುವುದು ಗ್ರಾಮ ಪಂಚಾಯತಿಯ ಕರ್ತವ್ಯ.

40. ಗ್ರಾಮ ಪಂಚಾಯತಿಯು ಯಾವುದೇ ಗುತ್ತಿಗೆ ಅಥವಾ ಒಪ್ಪಂದವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಮತ್ತು ಅಧಿನಿಯಮ _____ರ ಉಪನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು?

ಅ) 1996

ಆ) 1998

ಇ) 1999

ಈ) 2000

1999

ಗ್ರಾಮ ಪಂಚಾಯತಿಯು ಯಾವುದೇ ಗುತ್ತಿಗೆ ಅಥವಾ ಒಪ್ಪಂದವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಮತ್ತು ಅಧಿನಿಯಮ 1999ರ ಉಪನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು.

41. ಗ್ರಾಮ ಪಂಚಾಯತಿಗಳಲ್ಲಿ ಸ್ಥಾಯಿ ಸಮಿತಿಗಳ ರಚನೆಗೆ ಈ ಪ್ರಕರಣದಡಿ ಅವಕಾಶ ಕಲ್ಪಿಸಲಾಗಿದೆ?

ಅ) ಪ್ರಕರಣ 60

ಆ) ಪ್ರಕರಣ 60ಎ

ಇ) ಪ್ರಕರಣ 60ಬಿ

ಈ) ಪ್ರಕರಣ 61

ಪ್ರಕರಣ 61

42. ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳ ಚುನಾಯಿತ ಸದಸ್ಯರ ಪೈಕಿ ಒಬ್ಬರನ್ನು ಈ ಸ್ಥಾಯಿ ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸತಕ್ಕದ್ದು ____?

ಅ) ಸಾಮಾಜಿಕ ನ್ಯಾಯ ಸಮಿತಿ

ಆ) ಸಾಮಾನ್ಯ ಸ್ಥಾಯಿ ಸಮಿತಿ

ಇ) ಆಹಾರ ಖಾತರಿ ಸಮಿತಿ

www.karunaduexams.com

ಈ) ಮಹಿಳಾ ಮತ್ತು ಮಕ್ಕಳ ಸಂರಕ್ಷಣೆ ಸಮಿತಿ

ಸಾಮಾಜಿಕ ನ್ಯಾಯ ಸಮಿತಿ

43. ಪ್ರಕರಣ 61ರಡಿ ಗ್ರಾಮ ಪಂಚಾಯತಿಯಲ್ಲಿ ಕಡ್ಡಾಯವಾಗಿ ಎಷ್ಟು ಸ್ಥಾಯಿ ಸಮಿತಿಗಳನ್ನು ರಚಿಸಬೇಕು?

ಅ) ಮೂರು

ಆ) ನಾಲ್ಕು

ಇ) ಐದು

ಈ) ಎರಡು

ಮೂರು

44. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಗ್ರಾಮ ಪಂಚಾಯತಿಯ ಉಪಾಧ್ಯಕ್ಷನು ಸಾಮಾನ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿರಬೇಕು

II) ಪ್ರತಿ ಸ್ಥಾಯಿ ಸಮಿತಿ ಅಧ್ಯಕ್ಷ & ಉಪಾಧ್ಯಕ್ಷ ಒಳಗೊಂಡು ಮೂರಕ್ಕಿಂತ ಕಡಿಮೆ ಇಲ್ಲದ ಐದಕ್ಕಿಂತ ಹೆಚ್ಚಲ್ಲದ ಸದಸ್ಯರನ್ನು ಒಳಗೊಂಡಿರಬೇಕು.

III) ಸಮಿತಿಯ ಸದಸ್ಯರು ಪದಾವಧಿಯು ಚುನಾವಣೆ ದಿನಾಂಕದಿಂದ ಐದು ವರ್ಷ ಇರತಕ್ಕದ್ದು.

ಈ ಮೇಲಿನವುಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) ಹೇಳಿಕೆ I & II

ಆ) ಹೇಳಿಕೆ II & III

ಇ) ಹೇಳಿಕೆ I & III

ಈ) ಮೇಲಿನ ಎಲ್ಲವೂ ಸರಿ

ಹೇಳಿಕೆ I & II

ಮೇಲಿನ ಎರಡು ಹೇಳಿಕೆಗಳು ಮಾತ್ರ ಸರಿ. ಹೇಳಿಕೆ ಮೂರು ತಪ್ಪು ಏಕೆಂದರೆಪ ಪದನಿಮಿತ್ತ ಅಧ್ಯಕ್ಷರನ್ನು ಹೊರತುಪಡಿಸಿ, ಸ್ಥಾಯಿ ಸಮಿತಿಯ ಪ್ರತಿಯೊಬ್ಬ ಸದಸ್ಯರು ಪದಾವಧಿಯು ಚುನಾವಣೆ ದಿನಾಂಕದಿಂದ ಮೂವತ್ತು ತಿಂಗಳು ಅಥವಾ ಆತನು ಗ್ರಾಮ ಪಂಚಾಯತಿ ಸದಸ್ಯನಾಗಿರುವವರೆಗೆ ಇರತಕ್ಕದ್ದು.

45. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಾಣಿಕೆಯಾಗಿಲ್ಲ?

ಅ)  ಪ್ರಕರಣ64 – ಕಟ್ಟಡ ನಿರ್ಮಾಣದ ಬಗ್ಗೆ ನಿಯಂತ್ರಣ

ಆ) ಪ್ರಕರಣ65 – ಅನುಮತಿಯಿಲ್ಲದೆ ಕಟ್ಟಡಗಳ ನಿರ್ಮಾಣ ನಿಷೇದ & ನಿಯಂತ್ರಿಸುವುದು

ಇ) ಪ್ರಕರಣ 66 – ಲೈಸೆನ್ಸ್ ಇಲ್ಲದೇ ಉಪದ್ರವಕಾರಿ ಅಥವಾ ಅಪಾಯಕಾರಿ ವ್ಯಾಪಾರ ನಿಷೇಧ

www.karunaduexams.com

ಈ) ಪ್ರಕರಣ 69- ಅಂಗಡಿಗಳಿಗೆ ಲೈಸೆನ್ಸ್ ನೀಡುವುದು

ಪ್ರಕರಣ 66 – ಲೈಸೆನ್ಸ್ ಇಲ್ಲದೇ ಉಪದ್ರವಕಾರಿ ಅಥವಾ ಅಪಾಯಕಾರಿ ವ್ಯಾಪಾರ ನಿಷೇಧ

ಪ್ರಕರಣ 66 ಕಾರ್ಖಾನೆಗಳನ್ನು ನಿರ್ಮಿಸಲು ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಲು ಅನುಮತಿಗೆ ಸಂಬಂಧಸಿದೆ.ಪ್ರಕರಣ 67 ಲೈಸೆನ್ಸ್ ಇಲ್ಲದೇ ಉಪದ್ರವಕಾರಿ ಅಥವಾ ಅಪಾಯಕಾರಿ ವ್ಯಾಪಾರ ನಿಷೇಧ ಕುರಿತಾಗಿದೆ.

46. ಗ್ರಾಮ ಪಂಚಾಯತಿಯಲ್ಲಿ ವಾಣಿಜ್ಯ ಉದ್ದೇಶಗಳಿಗೆ ನೀಡಲಾಗುವ ಲೈಸೆನ್ಸ್ ಅನ್ನು ಎಷ್ಟು ವರ್ಷಗಳಿಗೊಮ್ಮೆ ನವೀಕರಣಗೊಳಿಕೊಳ್ಳಬೇಕು?

ಅ) ಎರಡು ವರ್ಷ

ಆ) ಒಂದು ವರ್ಷ

ಇ) ಮೂರು ವರ್ಷ

ಈ) ನಾಲ್ಕು ವರ್ಷ

ಒಂದು ವರ್ಷ

47. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ನೀವು ನಿಮ್ಮ ಪಂಚಾಯತಿ ವ್ಯಾಪ್ತಿಯ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ದೂರು ನೀಡಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ನೀವು ______?

ಅ) ಅಂಗಡಿಯ ಲೈಸೆನ್ಸ್ ರದ್ದುಮಾಡುವಿರಿ

ಆ) ಅಬಕಾರಿ ಇಲಾಖೆಗೆ ಕ್ರಮಕೈಗೊಳ್ಳಲು ಪತ್ರ ಬರೆಯುವಿರಿ

ಇ) ಅಂಗಡಿ ಮೇಲೆ ದಾಳಿ ನಡೆಸಿ ಮದ್ಯ ವಶಪಡಿಸಿಕೊಳ್ಳುವಿರಿ

ಈ) ನಮ್ಮಗೇಕೆ ಎಂದು ಸುಮ್ಮನಿರುವಿರಿ

ಅಬಕಾರಿ ಇಲಾಖೆಗೆ ಕ್ರಮಕೈಗೊಳ್ಳಲು ಪತ್ರ ಬರೆಯುವಿರಿ. ಯಾಕೆಂದರೆ ಇದಕ್ಕಾಗಿಯೇ ಪ್ರತ್ಯೇಕವಾಗಿ ಅಬಕಾರಿ ಇಲಾಖೆ ಇರುವುದರಿಂದ ಗ್ರಾಮ ಪಂಚಾಯತಿಯು ಮೊದಲು ಅವರಿಗೆ ತಿಳಿಸಬೇಕು.

48. ನೀರು ಸರಬರಾಜಿನ ಮೂಲಗಳ ಬಗ್ಗೆ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ತಿಳಿಸುವ ಪ್ರಕರಣ ____?

ಅ) ಪ್ರಕರಣ 80

ಆ) ಪ್ರಕರಣ 82

ಇ) ಪ್ರಕರಣ 84

ಈ) ಪ್ರಕರಣ 85

ಪ್ರಕರಣ 82

www.karunaduexams.com

49. ಗ್ರಾಮ ಪಂಚಾಯತಿಯಲ್ಲಿ ಉಪದ್ರವಕಾರಿ ಕೆಲಸಗಳನ್ನು ನಿರ್ವಹಿಸಿ ಅಪರಾಧ ಸಾಬೀತಾದರೆ ಅಂತಹ ವ್ಯಕ್ತಿಗೆ ರೂ_________ ದಂಡವಿಧಿಸಬಹುದು?

ಅ) ರೂ 100

ಆ) ರೂ 300

ಇ) ರೂ 500

ಈ) ರೂ 1000

ರೂ 500.ಈ ಮುಂಚೆ ರೂ 100 ದಂಡವನ್ನು ವಿಧಿಸಬಹುದಾಗಿತ್ತು.ಆದರೆ ತಿದ್ದುಪಡಿ ನಂತರ ರೂ 500 ಕ್ಕೆ ಏರಿಸಲಾಗಿದೆ.

50. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮತ್ತು ಲೈಸೆನ್ಸ್ ನೀಡುವಿಕೆಗೆ ಸಂಬಂಧಿಸಿದಂತೆ ಭಾದಿತ ವ್ಯಕ್ತಿ ಯಾರಿಗೆ ಅಫೀಲು ಸಲ್ಲಿಸಬಹುದು?

ಅ) ಗ್ರಾಮ ಪಂಚಾಯತಿ ಅಧ್ಯಕ್ಷರು

ಆ) ಕಾರ್ಯನಿರ್ವಾಹಣಾಧಿಕಾರಿ

ಇ) ತಾಲ್ಲೂಕ್ ಪಂಚಾಯತಿ ಅಧ್ಯಕ್ಷರು

ಈ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಕಾರ್ಯನಿರ್ವಾಹಣಾಧಿಕಾರಿ

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮತ್ತು ಲೈಸೆನ್ಸ್ ನೀಡುವಿಕೆಗೆ ಸಂಬಂಧಿಸಿದಂತೆ ಭಾದಿತ ವ್ಯಕ್ತಿ ಕಾರ್ಯನಿರ್ವಾಹಣಾಧಿಕಾರಿಗೆ ಆದೇಶ ತಲುಪಿದ ಮೂವತ್ತು ದಿನದೊಳಗೆ ಅಫೀಲು ಸಲ್ಲಿಸಬಹುದು. ಇಂತಹ ಸಂದರ್ಭದಲ್ಲಿ. ಕಾರ್ಯನಿರ್ವಾಹಣಾಧಿಕಾರಿಗಳ ತೀರ್ಪು ಅಂತಿಮವಾಗಿರುತ್ತದೆ.

51. ಗ್ರಾಮ ಪಂಚಾಯತಿ ಸದಸ್ಯರ ಕರ್ತವ್ಯಗಳ ಮತ್ತು ಜವಾಬ್ದಾರಿಗಳನ್ನು ಈ ಅಧ್ಯಾಯನ ಮತ್ತು ಪ್ರಕರಣದಡಿ ನೀಡಲಾಗಿದೆ _____?

ಅ) ಅಧ್ಯಾಯ III ಎ ಮತ್ತು110

ಆ) ಅಧ್ಯಾಯ IV ಮತ್ತು 109

ಇ) ಅಧ್ಯಾಯ IV ಎ ಮತ್ತು 110ಎ

ಈ) ಅಧ್ಯಾಯ V ಎ ಮತ್ತು 111

ಅಧ್ಯಾಯ IV ಎ ಮತ್ತು 110ಎ

ಅಧ್ಯಾಯ IV ಎ ಮತ್ತು 110ಎ ಹೊಸದಾಗಿ ಸೇರ್ಪಡೆಗೊಳಿಸಲಾಗಿದ್ದು, ಇದರಡಿ ಗ್ರಾಮ ಪಂಚಾಯತಿ ಸದಸ್ಯರ ಕರ್ತವ್ಯಗಳ ಮತ್ತು ಜವಾಬ್ದಾರಿಗಳನ್ನು ವಿವರಿಸಲಾಗಿದೆ.

www.karunaduexams.com

52. ಪಂಚಾಯತ್ ರಾಜ್ ಕಾಯಿದೆ-1993ರ ಅಧ್ಯಾಯ V ಶೀರ್ಷಿಕೆಯ ತಿದ್ದುಪಡಿ ನಂತರ ಇದನ್ನು ಹೀಗೆ ಕರೆಯಲಾಗುವುದು ______?

ಅ) ಗ್ರಾಮ ಪಂಚಾಯತಿ ಸಿಬ್ಬಂದಿ ಮತ್ತು ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆ

ಆ) ಪಂಚಾಯತ್ ರಾಜ್ ಸಿಬ್ಬಂದಿ ಮತ್ತು ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆ

ಇ) ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆ

ಈ) ಗ್ರಾಮ ಪಂಚಾಯತಿ ಸಿಬ್ಬಂದಿ ಮತ್ತು ಕರ್ನಾಟಕ ಗ್ರಾಮೀಣಭೀವೃದ್ಧಿ ಆಡಳಿತಾತ್ಮಕ ಸೇವೆ

ಗ್ರಾಮ ಪಂಚಾಯತಿ ಸಿಬ್ಬಂದಿ ಮತ್ತು ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆ

53. ಗ್ರಾಮ ಪಂಚಾಯತಿಯು ಇತರೆ ನೌಕರರನ್ನು ____ ಪೂರ್ವಾನುಮೋದನೆಯೊಂದಿಗೆ ನೇಮಕ ಮಾಡಿಕೊಳ್ಳಬಹುದು?

ಅ) ಗ್ರಾಮ ಪಂಚಾಯಿತಿ ಅಧ್ಯಕ್ಷರು

ಆ) ಕಾರ್ಯನಿರ್ವಾಹಣಾಧಿಕಾರಿ

ಇ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಈ) ಉಪ ಕಾರ್ಯದರ್ಶಿ

ಮುಖ್ಯಕಾರ್ಯನಿರ್ವಾಹಣಾಧಿಕಾರಿ

54. ಗ್ರಾಮ ಪಂಚಾಯತಿ ನೌಕರರ ವೇತನವನ್ನು ಈ ಖಾತೆಯಿಂದ ಭರಿಸತಕ್ಕದ್ದು _______?

ಅ) ಶೇ 3% ಖಾತೆ

ಆ) 14ನೇ ಹಣಕಾಸು

ಇ) ಶೇ 40% ಖಾತೆ

ಈ) ವರ್ಗ-1 (ಗ್ರಾ.ಪಂ.ನಿಧಿ)

ಶೇ 40% ಖಾತೆ

ಶೇ 40% ಎಂಬ ಖಾತೆ ಗ್ರಾಮ ಪಂಚಾಯತಿ ಸಿಬ್ಬಂದಿ (ಪಿಡಿಓ, ಕಾರ್ಯದರ್ಶಿ/ದ್ವಿತೀಯ ಲೆಕ್ಕ ಸಹಾಯಕ ಹೊರತುಪಡಿಸಿ) ಸಂಬಳಕ್ಕೆ ಪ್ರತ್ಯೇಕವಾಗಿ ತೆರೆಯಲಾಗಿದೆ. ಈ ಖಾತೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆಗೊಳ್ಳುವ ಹಣದಲ್ಲಿ ಶೇ 40%, ಗ್ರಾಮ ಪಂಚಾಯತಿ ತೆರಿಗೆ ವಸೂಲಾತಿ ಮತ್ತಿತರ ಆದಾಯದ ಶೇ40% ಅನ್ನು ಈ ಖಾತೆಗೆ ಜಮೆ ಮಾಡುವುದು ಕಡ್ಡಾಯ ಹಾಗೂ ಇದನ್ನು ನೌಕರರ ಸಂಬಳಕ್ಕೆ ಮಾತ್ರ ಬಳಸಬೇಕು. ಉದಾಹರಣೆಗೆ ಪಂಚಾಯತಿಯಲ್ಲಿ ರೂ 1000 ತೆರಿಗೆ ವಸೂಲಾಗಿದ್ದರೆ ರೂ 400 ಅನ್ನು ಈ ಖಾತೆಗೆ ಜಮೆ ಮಾಡುವುದು.

www.karunaduexams.com

55. ನಾಗನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕರವಸೂಲಿಗಾರ ಹುದ್ದೆ ಖಾಲಿ ಇದ್ದು, ಸದರಿ ಹುದ್ದೆಗೆ ಸಿಬ್ಬಂದಿ ನೇಮಕಾತಿ ಅವಶ್ಯವಾಗಿರುತ್ತದೆ, ಕರವಸೂಲಿಗಾರರ ಹುದ್ದೆ ನೇಮಕಾತಿ ಮಾಡಲು ಯಾರಿಗೆ ಅಧಿಕಾರ ನೀಡಲಾಗಿದೆ?

ಅ) ಗ್ರಾಮ ಪಂಚಾಯಿತಿ

ಆ) ತಾಲೂಕು ಪಂಚಾಯಿತಿ

ಇ) ಜಿಲ್ಲಾ ಪಂಚಾಯಿತಿ

ಈ) ರಾಜ್ಯ ಸರ್ಕಾರ

ಗ್ರಾಮ ಪಂಚಾಯತಿ

56. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ

I) ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪಂಚಾಯತಿ ಯಾವುದೇ ನೌಕರನಿಗೆ ದಂಡವಿಧಿಸಬಹುದು ಅಥವಾ ವಾರ್ಷಿಕ ಬಡ್ತಿ ತಡೆಯಿಡಿಯಬಹುದು

II) ಪಿ.ಡಿ.ಓ ಮಾಡಿದ ಈ ಆದೇಶದ ವಿರುದ್ದ ಭಾದಿತ ನೌಕರ ಮುಖ್ಯಕಾರ್ಯನಿರ್ವಾಹಣಾಧಿಕಾರಿಗೆ ಅಪೀಲು ಮಾಡಿಕೊಳ್ಳಬಹುದು.

ಈ ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುದು?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಹೇಳಿಕೆ ಒಂದು ಮಾತ್ರ

ಮೇಲಿನ ಹೇಳಿಕೆಗಳಲ್ಲಿ ಹೇಳಿಕೆ ಒಂದು ಸರಿಯಾಗಿದೆ ಆದರೆ ಹೇಳಿಕೆ ಎರಡು ತಪ್ಪು.ಪಿ.ಡಿ.ಓ ಮಾಡಿದ ಈ ಆದೇಶದ ವಿರುದ್ದ ಭಾದಿತ ನೌಕರ ಕಾರ್ಯನಿರ್ವಾಹಣಾಧಿಕಾರಿಗೆ ಅಪೀಲು ಮಾಡಿಕೊಳ್ಳಬಹುದು.

57. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಗ್ರಾಮ ಪಂಚಾಯತಿ ತಾನು ನೇಮಕ ಮಾಡಿದ ಯಾವುದೇ ನೌಕರನ ದರ್ಜೆಯಿಂದ ಇಳಿಸಬಹುದು, ಕೆಲಸದಿಂದ ತೆಗೆದು ಹಾಕಬಹುದು ಅಥವಾ ವಜಾ ಮಾಡಬಹುದು

II) ಗ್ರಾಮ ಪಂಚಾಯತಿ ಆದೇಶದ ವಿರುದ್ದ ಭಾದಿತ ನೌಕರ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಅಪೀಲು ಸಲ್ಲಿಸಬಹುದು.

ಈ ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುದು?

www.karunaduexams.com

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಹೇಳಿಕೆ ಒಂದು ಮಾತ್ರ

ಮೇಲಿನ ಹೇಳಿಕೆಗಳಲ್ಲಿ ಹೇಳಿಕೆ ಒಂದು ಸರಿಯಾಗಿದೆ ಆದರೆ ಹೇಳಿಕೆ ಎರಡು ತಪ್ಪು.ಪಿ.ಡಿ.ಓ ಮಾಡಿದ ಈ ಆದೇಶದ ವಿರುದ್ದ ಭಾದಿತ ನೌಕರ ಮುಖ್ಯಕಾರ್ಯನಿರ್ವಾಹಣಾಧಿಕಾರಿಗೆ ಅಪೀಲು ಮಾಡಿಕೊಳ್ಳಬಹುದು.

58. ಗ್ರಾಮ ಪಂಚಾಯತಿಗೆ ಅಗತ್ಯವಿದ್ದಾಗ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿಯನ್ನು ನಿಯೋಜನೆ ಮಾಡುವವರು ____?

ಅ) ಸರ್ಕಾರ

ಆ) ಜಿಲ್ಲಾ ಪಂಚಾಯತಿ

ಇ) ಗ್ರಾಮ ಪಂಚಾಯತಿ

ಈ) ತಾಲ್ಲೂಕು ಪಂಚಾಯತಿ

ಸರ್ಕಾರ

59. ಈ ಕೆಳಕಂಡ ಸಿಬ್ಬಂದಿ ವರ್ಗದವರಲ್ಲಿ ಯಾರನ್ನು ಗ್ರಾಮ ಪಂಚಾಯಿತಿಯು ನೇರವಾಗಿ ನೇಮಕಾತಿ ಮಾಡಿಕೊಳ್ಳಬಹುದಾಗಿದೆ?

1) ಸ್ವಚ್ಛತಾಗಾರ

2) ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್

3) ಪಂಪ್ ಆಪರೇಟರ್ ಕಂ ಮೆಕಾನಿಕ್

4) ಲೆಕ್ಕ ಸಹಾಯಕ

5) ಜವಾನ

ಉತ್ತರಗಳು:

ಅ) 1, 3, 5

ಆ) 2, 3, 5

ಇ) 1, 2, 3, 5

www.karunaduexams.com

**ಈ) ಮೇಲಿನ ಎಲ್ಲವೂ**

1, 2, 3, 5

ಲೆಕ್ಕ ಸಹಾಯಕನನ್ನು ಸರ್ಕಾರ ನೇಮಕ ಮಾಡುತ್ತದೆ.

60. ಈ ಕೆಳಗಿನವರುಗಳನ್ನು ಗಮನಿಸಿ:

I) ಚುನಾಯಿತ ಸದಸ್ಯರು

II) ಲೋಕಸಭಾ ಸದಸ್ಯರು

III) ವಿಧಾನ ಸಭಾ ಸದಸ್ಯರು

IV) ವಿಧಾನ ಪರಿಷತ್ ಸದಸ್ಯರು

ತಾಲ್ಲೂಕ್ ಪಂಚಾಯತಿ ಈ ಮೇಲಿನ ಯಾರನ್ನು ಒಳಗೊಂಡಿರುತ್ತದೆ?

ಅ) I, II & III

ಆ) I, III & IV

ಇ) I, & IV

ಈ) I, II, III & IV

I, II, III & IV

ಮೇಲಿನ ಎಲ್ಲರೂ

61. ತಾಲ್ಲೂಕ ಪಂಚಾಯತಿ ಅಧ್ಯಕ್ಷರು ಚೀಟಿ ಎತ್ತುವ ಮೂಲಕ ಸರದಿಯ ಪ್ರಕಾರ ತಾಲ್ಲೂಕಿನ ಗ್ರಾಮ ಪಂಚಾಯತಿ ಅಧ್ಯಕ್ಷರುಗಳ ಸಂಖ್ಯೆಯ ಐದನೇ-ಒಂದರಷ್ಟು ಅಧ್ಯಕ್ಷರನ್ನು ಎಷ್ಟು ವರ್ಷದ ಅವಧಿಗೆ ಆಯ್ಕೆಮಾಡುತ್ತಾರೆ?

ಅ) ಎರಡು ವರ್ಷ

ಆ) ಒಂದು ವರ್ಷ

ಇ) ಮೂರು ವರ್ಷ

ಈ) ಒಂದುವರೆ ವರ್ಷ

ಒಂದು ವರ್ಷ

ತಾಲ್ಲೂಕ ಪಂಚಾಯತಿ ಅಧ್ಯಕ್ಷರು ಚೀಟಿ ಎತ್ತುವ ಮೂಲಕ ಒಂದು ವರ್ಷದ ಅವಧಿಗೆ ಸರದಿಯ ಪ್ರಕಾರ ತಾಲ್ಲೂಕಿನ ಗ್ರಾಮ ಪಂಚಾಯತಿ ಅಧ್ಯಕ್ಷರುಗಳ ಸಂಖ್ಯೆಯ ಐದನೇ-ಒಂದರಷ್ಟು ಅಧ್ಯಕ್ಷರನ್ನು ತಾಲ್ಲೂಕ ಪಂಚಾಯತಿಗೆ ಆಯ್ಕೆಮಾಡುತ್ತಾರೆ.

62. ತಾಲ್ಲೂಕು ಪಂಚಾಯತಿಯು ತಾಲ್ಲೂಕಿನ ಜನಸಂಖ್ಯೆಯ ______ ಗೆ ಒಬ್ಬ ಸದಸ್ಯನಂತೆ ಚುನಾಯಿತರಾದ ವ್ಯಕ್ತಿಗಳನ್ನು ಒಳಗೊಂಡಿರಬೇಕು?

www.karunaduexams.com

ಅ) 10000

ಆ) 12500-15000

ಇ) 15000

ಈ) 12000

12500-15000

ಈ ಮುಂಚೆ 10000 ಜನಸಂಖ್ಯೆಗೆ ಒಬ್ಬ ಸದಸ್ಯನು ಚುನಾಯಿತನಾಗುತ್ತಿದ್ದ. ತಿದ್ದುಪಡಿ ನಂತರ 12500-15000 ಜನಸಂಖ್ಯೆಗೆ ಒಬ್ಬ ಸದಸ್ಯನು ಚುನಾಯಿತನಾಗುತ್ತಾನೆ.

63. ತಾಲ್ಲೂಕ ಪಂಚಾಯತಿಯ ಚುನಾವಣಾ ಕ್ಷೇತ್ರಕ್ಕಾಗಿ ಮತದಾರರ ಪಟ್ಟಿಯನ್ನು ತಯಾರಿಸುವವರು ಯಾರು?

ಅ) ಉಪವಿಭಾಗಧಿಕಾರಿ

ಆ) ತಹಸೀಲ್ದಾರ್

ಇ) ಚುನಾವಣಾ ಆಯೋಗ

ಈ) ಹೆಚ್ಚುವರಿ ಜಿಲ್ಲಾಧಿಕಾರಿ

ತಹಸೀಲ್ದಾರ್

64. ತಾಲ್ಲೂಕ ಪಂಚಾಯತಿಗೆ ಸದಸ್ಯನಾಗಲು ಅನರ್ಹತೆ ಬಗ್ಗೆ ವಿವರಣೆ ನೀಡುವ ಪ್ರಕರಣ ____?

ಅ) ಪ್ರಕರಣ 110

ಆ) ಪ್ರಕರಣ 128

ಇ) ಪ್ರಕರಣ 130

ಈ)ಪ್ರಕರಣ 131

ಪ್ರಕರಣ 128

65. ಸುರೇಶನು ತಾಲ್ಲೂಕ್ ಪಂಚಾಯತಿ ಚುನಾವಣೆಯಲ್ಲಿ ಏಕಕಾಲದಲ್ಲಿ ಎರಡು ಕ್ಷೇತ್ರದಲ್ಲಿ ಸ್ಪರ್ಧಿಸಿ ಚುನಾಯಿತನಾಗಿದ್ದಾನೆ. ಸುರೇಶ್ ತಾನು ಸೇವೆ ಮಾಡುವ ಬಯಸುವ ಒಂದು ಕ್ಷೇತ್ರವನ್ನು ಯಾರಿಗೆ ಲಿಖಿತ ಅರ್ಜಿ ನೀಡಿ ಆಯ್ಕೆಮಾಡಿಕೊಳ್ಳಬೇಕು?

ಅ) ಕಾರ್ಯನಿರ್ವಾಹಣಾಧಿಕಾರಿ

ಆ) ತಾಲ್ಲೂ ಪಂಚಾಯತ್ ಅಧ್ಯಕ್ಷರು

ಇ) ಜಿಲ್ಲಾಧಿಕಾರಿ

ಈ) ಚುನಾವಣಾ ಆಯೋಗ

ಜಿಲ್ಲಾಧಿಕಾರಿ

www.karunaduexams.com

66. ಯಾವ ಪ್ರಕರಣದಡಿ ದುನರ್ಡನೆ ಆಧಾರದ ಮೇಲೆ ತಾಲ್ಲೂಕು ಪಂಚಾಯತಿ ಸದಸ್ಯರನ್ನು ತೆಗೆದುಹಾಕಬಹುದಾಗಿದೆ?

ಅ) ಪ್ರಕರಣ 134

ಆ) ಪ್ರಕರಣ 136

ಇ) ಪ್ರಕರಣ 136 ಎ

ಈ) ಪ್ರಕರಣ 137

ಪ್ರಕರಣ 136

67. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಖೆಗಳು ಯಾವುದು?

I) ತಾಲ್ಲೂಕು ಪಂಚಾಯತಿ ಸದಸ್ಯನು ರಾಜೀನಾಮೆಯನ್ನು ಅಧ್ಯಕ್ಷರಿಗೆ ನೀಡಬೇಕು

II) ತಾಲ್ಲೂಕು ಪಂಚಾಯತಿ ಅಧ್ಯಕ್ಷರು ರಾಜೀನಾಮೆಯನ್ನು ಜಿಲ್ಲಾಧಿಕಾರಿಗೆ ನೀಡಬೇಕು

III) ರಾಜೀನಾಮೆ ನೀಡಿದ ಹದಿನೈದು ದಿನದೊಳಗೆ ವಾಪಸ್ಸು ಪಡೆಯದಿದ್ದರೆ, ಹುದ್ದೆ ತೆರವಾಗುವುದು

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಗುರುತಿಸಿ:

ಅ) ಹೇಳಿಕೆ ಒಂದು ಮತ್ತು ಎರಡು ಮಾತ್ರ

ಆ) ಹೇಳಿಕೆ ಎರಡು ಮತ್ತು ಮೂರು ಮಾತ್ರ

ಇ) ಹೇಳಿಕೆ ಒಂದು ಮತ್ತು ಮೂರು ಮಾತ್ರ

ಈ) ಮೇಲಿನ ಎಲ್ಲವೂ ಸರಿ

ಮೇಲಿನ ಎಲ್ಲವೂ ಸರಿ

68. ತಾಲ್ಲೂಕ್ ಪಂಚಾಯತಿ ಸದಸ್ಯರು ಈ ಪ್ರಕರಣದಡಿ ತಮ್ಮ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆ ಮಾಡುವುದು ಕಡ್ಡಾಯವಾಗಿದೆ?

ಅ) ಪ್ರಕರಣ 139

ಆ) ಪ್ರಕರಣ 136ಎ

ಇ) ಪ್ರಕರಣ 136ಬಿ

ಈ) ಪ್ರಕರಣ 140

ಪ್ರಕರಣ 136ಎ

69. ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆ ಯಾವುದು?

ಅ) ತಾಲ್ಲೂಕು ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿ ಐದು ವರ್ಷ

ಆ) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ದ ಅವಿಶ್ವಾಸ ನಿರ್ಣಯವನ್ನು ಮೂವತ್ತು ತಿಂಗಳೊಳಗೆ ಮಂಡಿಸತಕ್ಕದ್ದಲ್ಲ.

www.karunaduexams.com

ಇ) ತಾಲ್ಲೂಕ್ ಪಂಚಾಯತಿ ಬಿಲ್ ಪಾವತಿ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಣಾಧಿಕಾರಿ ಸಹಿ ಮಾಡತಕ್ಕದ್ದು.

ಈ) ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆ ಖಾಲಿ ಇದ್ದಾಗ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷನು ಅಧ್ಯಕ್ಷನ ಹುದ್ದೆಯನ್ನು ನಿರ್ವಹಿಸುವುದು.

ತಾಲ್ಲೂಕ್ ಪಂಚಾಯತಿ ಬಿಲ್ ಪಾವತಿ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಣಾಧಿಕಾರಿ ಸಹಿ ಮಾಡತಕ್ಕದ್ದು.

70. ಈ ಕೆಳಗಿನವುಗಳಲ್ಲಿ ತಪ್ಪಾದ ಹೇಳಿಕೆಯನ್ನು ಗುರುತಿಸಿ:

ಅ) ತಾಲ್ಲೂಕ್ ಪಂಚಾಯತಿ ಸಭೆಯನ್ನು ಕನಿಷ್ಠ ಎರಡು ತಿಂಗಳಿಗೊಮ್ಮೆ ಒಂದು ಬಾರಿ ನಡೆಸುವುದು

ಆ) ತಾಲ್ಲೂಕ್ ಪಂಚಾಯತಿ ಪ್ರಥಮ ಸಭೆಯ ದಿನಾಂಕವನ್ನು ಉಪವಿಭಾಗಧಿಕಾರಿ ನಿಗದಿಪಡಿಸುತ್ತಾರೆ

ಇ) ಒಟ್ಟು ಸದಸ್ಯರ ಮೂರನೇ ಒಂದರಷ್ಟು ಸಭೆಯ ಕೋರಂ ಆಗಿರತಕ್ಕದ್ದು

ಈ) ಸಭೆಯ ನಿರ್ಣಯವನ್ನು ಸಭೆ ನಡೆದ ಹತ್ತು ದಿನದೊಳಗೆ ಮುಖ್ಯಕಾರ್ಯನಿರ್ವಾಹಣಾಧಿಕಾರಿಗೆ ಸಲ್ಲಿಸಬೇಕು

ಒಟ್ಟು ಸದಸ್ಯರ ಮೂರನೇ ಒಂದರಷ್ಟು ಸಭೆಯ ಕೋರಂ ಆಗಿರತಕ್ಕದ್ದು.ಒಟ್ಟು ಸದಸ್ಯರ ಅರ್ಧದಷ್ಟು ಸಂಖ್ಯೆ ತಾ.ಪಂ ಸಾಮಾನ್ಯ ಸಭೆಯ ಸಭೆಯಲ್ಲಿ ಕಾರ್ಯಕಲಾಪವನ್ನು ನಿರ್ವಹಿಸುವುದಕ್ಕಾಗಿ ಕೋರಂ ಆಗಿರತಕ್ಕದ್ದು.

71. ತಾಲ್ಲೂಕ್ ಪಂಚಾಯತಿಗೆ ಸಂಬಂಧಿಸಿದಂತೆ ಪ್ರಕರಣ 145 ಇದಕ್ಕೆ ಸಂಬಂಧಿಸಿದೆ ______?

ಅ) ಸಮಿತಿಗಳ ಕಾರ್ಯವಿಧಾನ

ಆ) ಅಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯ

ಇ) ತಾಲ್ಲೂಕ್ ಪಂಚಾಯತಿಯ ಪ್ರಕಾರ್ಯಗಳು

ಈ) ಉಪಾಧ್ಯಕ್ಷನ ಅಧಿಕಾರಿಗಳು ಮತ್ತು ಕರ್ತವ್ಯಗಳು

ತಾಲ್ಲೂಕ್ ಪಂಚಾಯತಿಯ ಪ್ರಕಾರ್ಯಗಳು

72. ತಾಲ್ಲೂಕು ಪಂಚಾಯತಿ ಅಧ್ಯಕ್ಷರು ವಿಕೋಪ ಉಂಟಾದ ಸಂದರ್ಭದಲ್ಲಿ ಎಷ್ಟು ರೂ ಗಳ ವರೆಗೆ ಮಂಜೂರಾತಿ ನೀಡುವ ಅಧಿಕಾರವನ್ನು ಹೊಂದಿದ್ದಾರೆ?

ಅ) ರೂ 100000

ಆ) ರೂ 20,000

ಇ) ರೂ 25,000

ಈ) ರೂ 30,000

www.karunaduexams.com

ರೂ 100000

ಈ ಮುಂಚೆ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ವಿಕೋಪ ಉಂಟಾದ ಸಂದರ್ಭದಲ್ಲಿ ರೂ 25000 ಗಳ ವರೆಗೆ ಮಂಜೂರಾತಿ ನೀಡುವ ಅಧಿಕಾರವನ್ನು ಹೊಂದಿದ್ದರು.ಪ್ರಕರಣಕ್ಕೆ 152ಕ್ಕೆ ತಿದ್ದುಪಡಿ ತರಲಾಗಿದ್ದು ಮಿತಿಯನ್ನು ರೂ 1 ಲಕ್ಷಕ್ಕೆ ಹೆಚ್ಚಿಸಲಾಗಿದೆ.

73. ಇವುಗಳಲ್ಲಿ ಯಾವುದು ತಾಲ್ಲೂಕು ಪಂಚಾಯತಿ ಸ್ಥಾಯಿ ಸಮಿತಿ ಆಗಿಲ್ಲ?

ಅ) ಸಾಮಾನ್ಯ ಸ್ಥಾಯೀ ಸಮಿತಿ

ಆ) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ

ಇ) ಶಿಕ್ಷಣ ಮತ್ತು ಆರೋಗ್ಯ ಸಮಿತಿ

ಈ) ಸಾಮಾಜಿಕ ನ್ಯಾಯಾ ಸಮಿತಿ

ಶಿಕ್ಷಣ ಮತ್ತು ಆರೋಗ್ಯ ಸಮಿತಿ

74. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಯನ್ನು ಗುರುತಿಸಿ:

ಅ) ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಸಾಮಾನ್ಯ ಸ್ಥಾಯೀ ಸಮಿತಿ ಅಧ್ಯಕ್ಷನಾಗಿರುತ್ತಾರೆ

ಆ) ಉಪಾಧ್ಯಕ್ಷನು ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ ಅಧ್ಯಕ್ಷನಾಗಿರುತ್ತಾರೆ.

ಸರಿಯಾದ ಉತ್ತರವನ್ನು ಕೆಳಗೆ ನೀಡಿರುವ ಕೋಡ್ ಮೂಲಕ ಉತ್ತರಿಸಿ:

ಅ) ಹೇಳಿಕೆ ಒಂದು ಮಾತ್ರ ಸರಿ

ಆ) ಹೇಳಿಕೆ ಎರಡು ಮಾತ್ರ ಸರಿ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಎರಡು ಹೇಳಿಕೆ ತಪ್ಪು

ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಅಧ್ಯಕ್ಷನಾಗಿರುತ್ತಾರೆ ಉಪಾಧ್ಯಕ್ಷನು ಸಾಮಾನ್ಯ ಸ್ಥಾಯೀ ಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಅಧ್ಯಕ್ಷನಾಗಿರುತ್ತಾರೆ.

75. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿ ಹುದ್ದೆಯು ಈ ಹುದ್ದೆಗೆ ಸಮನಾಗಿರುತ್ತದೆ ______?

ಅ) ಉಪ-ವಿಭಾಗಧಿಕಾರಿ-ಗ್ರೂಪ್ ಬಿ

ಆ) ತಹಸೀಲ್ದಾರ್

www.karunaduexams.com

ಇ) ಕ್ಷೇತ್ರಭಿವೃದ್ದಿ ಅಧಿಕಾರಿ ದರ್ಜೆ –ಗ್ರೂಪ್ ಎ

ಈ) ಉಪ-ವಿಭಾಗಧಿಕಾರಿ-ಗ್ರೂಫ್ ಎ

ಉಪ-ವಿಭಾಗಧಿಕಾರಿ-ಗ್ರೂಫ್ ಎ

76. ಕಾರ್ಯನಿರ್ವಾಹಣಾಧಿಕಾರಿ ರವರು ಈ ಕೆಳಗಿನ ಯಾವ ಹಕ್ಕನ್ನು ಹೊಂದಿರುವುದಿಲ್ಲ?

ಅ) ತಾಲ್ಲೂಕ್ ಪಂಚಾಯತಿ ಪ್ರತಿ ಸಭೆಗೆ ಹಾಜರಾಗುವ

ಆ) ಯಾವುದೇ ಸಮಿತಿಯ ಸಭೆಗೆ ಹಾಜರಾಗುವ ಮತ್ತು ಪಾಲ್ಗೊಳ್ಳುವ ಹಕ್ಕು

ಇ) ನಿರ್ಣಯ ಮಂಡಿಸುವ ಮತ್ತು ಮತ ಚಲಾಯಿಸುವ ಹಕ್ಕು

ಈ) ಮೇಲಿನ ಎಲ್ಲವೂ

ನಿರ್ಣಯ ಮಂಡಿಸುವ ಮತ್ತು ಮತ ಚಲಾಯಿಸುವ ಹಕ್ಕು

77. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ

ಅ) ಯಾವುದೇ ಸದಸ್ಯನು ಒಂದಕ್ಕಿಂತ ಹೆಚ್ಚು ಸ್ಥಾಯೀ ಸಮಿತಿಯಲ್ಲಿ ಸೇವೆ ಸಲ್ಲಿಸಲು ಅರ್ಹನಾಗಿರುವುದಿಲ್ಲ

ಆ) ಪ್ರತಿ ಸ್ಥಾಯಿ ಸಮಿತಿಗೆ ಕಾರ್ಯನಿರ್ವಾಹಕಧಿಕಾರಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿ ಆಗಿರುತ್ತಾರೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಎರಡು ಹೇಳಿಕೆ ಸರಿ

78. ತಾಲ್ಲೂಕು ಪಂಚಾಯತಿಯ ನಿಧಿಯಿಂದ ಹಣವನ್ನು ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರ ಇವರಿಗಿದೆ ____?

ಅ) ಅಕೌಂಟ್ ಆಫೀಸರ್

ಆ) ಕಾರ್ಯನಿರ್ವಾಹಕ ಅಧಿಕಾರಿ

ಇ) ಮ್ಯಾನೇಜರ್

ಈ) ಕಾರ್ಯನಿರ್ವಹಕ ಅಧಿಕಾರಿ ಮತ್ತು ಅಧ್ಯಕ್ಷರು

ಕಾರ್ಯನಿರ್ವಾಹಕ ಅಧಿಕಾರಿ

www.karunaduexams.com

79. ತಾಲ್ಲೂಕು ಪಂಚಾಯತಿ ಅಧ್ಯಕ್ಷರ, ಉಪಾಧ್ಯಕ್ಷರ ಮತ್ತು ಸದಸ್ಯರ ಮಾಸಿಕ ಗೌರವ ಧನ ಎಷ್ಟಿದೆ?

ಅ) 4500, 3000, 1500

ಆ) 4500, 2500, 1000

ಇ) 5000, 3500, 2000

ಈ) 5000, 4000, 2500

4500, 3000, 1500

80. ತಾಲ್ಲೂಕು ಪಂಚಾಯತಿ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಕೆಲವು ಪ್ರಕರಣಗಳಲ್ಲಿ ಅಂತಿಮ ತೀರ್ಮಾನ ಇವರದಾಗಿರುತ್ತದೆ ____?

ಅ) ತಾಲ್ಲೂಕ್ ಸಿವಿಲ್ ನ್ಯಾಯಾಧೀಶ

ಅ) ಹೈಕೋರ್ಟ್ ನ್ಯಾಯಾಧೀಶ

ಇ) ಜಿಲ್ಲಾ ನ್ಯಾಯಾಧೀಶ

ಈ) ಸುಪ್ರೀಂಕೋರ್ಟ್ ನ್ಯಾಯಾಧೀಶ

ತಾಲ್ಲೂಕ್ ಸಿವಿಲ್ ನ್ಯಾಯಾಧೀಶ

81. ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರಲ್ಲಿ ಜಿಲ್ಲೆಯ ತಾಲ್ಲೂಕುಗಳಿಂದ ಚುನಾಯಿತರಾದ _______ ಕ್ಕಿಂತಲೂ ಕಡಿಮೆಯಲ್ಲದ ಸದಸ್ಯರು ಇರತಕ್ಕದ್ದು?

ಅ) ಹತ್ತು

ಆ) ಹದಿನೈದು

ಇ) ಇಪ್ಪತ್ತು

ಈ) ಇಪ್ಪತ್ತೈದು

ಇಪ್ಪತ್ತು

ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರಲ್ಲಿ ಜಿಲ್ಲೆಯ ತಾಲ್ಲೂಕುಗಳಿಂದ ಚುನಾಯಿತರಾದ ಇಪ್ಪತ್ತಕ್ಕಿಂತಲೂ ಕಡಿಮೆಯಲ್ಲದ ಸದಸ್ಯರು ಇರಬೇಕು. ಇದರ್ಥ ಜಿಲ್ಲಾ ಪಂಚಾಯತಿ ಕನಿಷ್ಠ 20 ಸದಸ್ಯರನ್ನು ಒಳಗೊಂಡಿರಬೇಕು.

82. ಜಿಲ್ಲಾ ಪಂಚಾಯತಿಯು ಈ ಕೆಳಗಿನ ಯಾರನ್ನು ಒಳಗೊಂಡಿರುವುದಿಲ್ಲ?

I) ರಾಜ್ಯ ಸಭೆ ಮತ್ತು ರಾಜ್ಯ ವಿಧಾನ ಸಭೆ ಸದಸ್ಯ

II) ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ

III) ಆಯ್ದಾ ಗ್ರಾಮ ಪಂಚಾಯತಿಗಳ ಅಧ್ಯಕ್ಷ

www.karunaduexams.com

IV) ನಗರಸಭೆಗಳ ಅಧ್ಯಕ್ಷ

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಉತ್ತರಿಸಿ:

ಅ) I & II

ಆ) III & IV

ಇ) I & III

ಈ) II & IV

III & IV

ಜಿಲ್ಲಾ ಪಂಚಾಯತಿಯು ಚುನಾಯಿತ ಸದಸ್ಯರನ್ನ, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರನ್ನ (ವ್ಯಾಪ್ತಿಗೆ ಒಳಪಡುವವರು ಮಾತ್ರ), ಜಿಲ್ಲಾ ವ್ಯಾಪ್ತಿಯೊಳಗೆ ಮತದಾರರೆಂದು ನೋಂದಾಯಿತರಾದ ರಾಜ್ಯ ಸಭೆ ಸದಸ್ಯ ಮತ್ತು ರಾಜ್ಯ ವಿಧಾನಸಭೆ ಸದಸ್ಯರನ್ನು ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತಿ ಅಧ್ಯಕ್ಷರನ್ನು ಒಳಗೊಂಡಿರಬೇಕು.

83. ಜಿಲ್ಲಾ ಪಂಚಾಯತಿಗೆ ಎಷ್ಟು ಜನಸಂಖ್ಯೆಗೆ ಒಬ್ಬರಂತೆ ಸದಸ್ಯನು ಚುನಾಯಿತರಾಗಬೇಕು _____?

ಅ) 40000-55000

ಆ) 35000-45000

ಇ) 40000-50000

ಈ) 45000-50000

35000-45000

ಈ ಮುಂಚೆ 40000 ಜನಸಂಖ್ಯೆಗೆ ಒಬ್ಬ ಸದಸ್ಯನು ಚುನಾಯಿತರಾಗಬಹುದಾಗಿತ್ತು. ತಿದ್ದುಪಡಿ ನಂತರ 35000-45000 ಜನಸಂಖ್ಯೆಗೆ ಒಬ್ಬರಂತೆ ಸದಸ್ಯನು ಚುನಾಯಿತರಾಗಬೇಕು.

84. ಜಿಲ್ಲಾ ಪಂಚಾಯತಿ ಸದಸ್ಯರಿಗೆ ಸಂಬಂಧಿಸಿದಂತೆ ಈಕೆಳಗಿನ ಹೇಳಿಕೆಗಳನ್ನು ಗಮನಿಸಿ:

ಅ) ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜನಸಂಖ್ಯೆ ಪ್ರತಿ 30000 ಕ್ಕೆ ಒಬ್ಬ ಸದಸ್ಯರಿತಕ್ಕದ್ದು

ಆ) ಬೆಂಗಳೂರು ನಗರ ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆ ಪ್ರತಿ 20000 ಕ್ಕೆ ಒಬ್ಬ ಸದಸ್ಯರಿತಕ್ಕದ್ದು

ಇ) ಕೊಡಗು ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆ ಪ್ರತಿ 15000 ಕ್ಕೆ ಒಬ್ಬ ಸದಸ್ಯರಿತಕ್ಕದ್ದು.

ಈ ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಹೇಳಿಕೆ ಒಂದು ಮತ್ತು ಎರಡು

www.karunaduexams.com

ಈ) ಮೇಲಿನ ಎಲ್ಲವೂ

ಹೇಳಿಕೆ ಒಂದು ಮತ್ತು ಎರಡು

ಮೇಲಿನ ಹೇಳಿಕೆಗಳಲ್ಲಿ ಹೇಳಿಕೆ ಒಂದು ಮತ್ತುಎರಡು ಸರಿ. ಕೊಡಗು ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆ ಪ್ರತಿ 18000 ಕ್ಕೆ ಒಬ್ಬ ಸದಸ್ಯರಿತಕ್ಕದ್ದು

85. ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಜನಗಣತಿಯಂತೆ ಜನಸಂಖ್ಯೆ ಆಧಾರದ ಮೇಲೆ ನಿರ್ಧರಿಸುವವರು ಯಾರು?

ಅ) ಸರ್ಕಾರ

ಆ) ಚುನಾವಣಾ ಆಯೋಗ

ಇ) ರಾಜ್ಯಪಾಲರು

ಈ) ಜಿಲ್ಲಾಧಿಕಾರಿ

ಚುನಾವಣಾ ಆಯೋಗ

ಪ್ರತಿಯೊಂದು ಜನಗಣತಿಯ ಅಂಕಿ-ಅಂಶಗಳನ್ನು ಪ್ರಕಟಿಸಿದ ಮೇಲೆ, ಜಿಲ್ಲಾ ಪಂಚಾಯತಿ ಚುನಾವಣಾ ಸದಸ್ಯರ ಸಂಖ್ಯೆಯನ್ನು ಆ ಜನಗಣತಿಯಲ್ಲಿ ಖಚಿತವಾದಂತೆ ಜಿಲ್ಲೆಯ ಜನಸಂಖ್ಯೆ ಆಧಾರದ ಮೇಲೆ ಚುನಾವಣಾ ಆಯೋಗ ನಿರ್ಧರಿಸುತ್ತದೆ.

86. ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯನ್ನು ಇವರು ತಯಾರಿಸುವುದು _______?

ಅ) ತಹಶೀಲ್ದಾರ್

ಆ) ಉಪ ಜಿಲ್ಲಾಧಿಕಾರಿ

ಇ) ರಾಜ್ಯ ಚುನಾವಣಾ ಆಯೋಗ

ಈ) ಉಪವಿಭಾಗಧಿಕಾರಿ

ಉಪವಿಭಾಗಧಿಕಾರಿ

ಜಿಲ್ಲಾ ಪಂಚಾಯತಿ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಧಿಕಾರಿ ತಯಾರಿಸುತ್ತಾರೆ.

87. ಜಿಲ್ಲಾ ಪಂಚಾಯತಿ ಅನುಮೋದನೆ ಪಡೆಯದೇ ಅನುಕ್ರಮವಾಗಿ ಎಷ್ಟು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ ಜಿಲ್ಲಾ ಪಂಚಾಯತ್ ಸದಸ್ಯನ ಸ್ಥಾನ ಖಾಲಿಯಾಗತಕ್ಕದ್ದು?

ಅ) ಎರಡು

ಆ) ಮೂರು

ಇ) ನಾಲ್ಕು

www.karunaduexams.com

ಈ) ಐದು

ನಾಲ್ಕು

ಪ್ರಕರಣ 175ಕ್ಕೆ ತಿದ್ದುಪಡಿ ತರಲಾಗಿದ್ದು, ತಿದ್ದುಪಡಿಯಂತೆ ಸದಸ್ಯನು ನಾಲ್ಕು ಒಂದಾದ ಮೇಲೊಂದರಂತೆ ಆದ ಸಭೆಗಳಿಗೆ ಗೈರು ಹಾಜರಾದರೆ ಮತ್ತು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಅಗತ್ಯವಿದ್ದಾಗ ಸಭೆಯನ್ನು ಕರೆಯಲು ಒಂದಾದ ಮೇಲೊಂದರಂತೆ ಎರಡು ಸಭೆಗಳನ್ನು ಕರೆಯಲು ವಿಫಲನಾದರೆ ಸದಸ್ಯತ್ವ ರದ್ದಾಗುತ್ತದೆ ( ಸೂಚನೆ: ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರಿಗೂ ಮೇಲಿನ ನಿಬಂಧನೆ ಅನ್ವಯಿಸುತ್ತದೆ).

88. ಜಿಲ್ಲಾ ಪಂಚಾಯತಿಯ ಸದಸ್ಯರಾಗಲು ಇರುವ ಅನರ್ಹತೆ ಬಗ್ಗೆ ವಿವರಣೆ ನೀಡುವ ಪ್ರಕರಣ _______?

ಅ) ಪ್ರಕರಣ 164

ಆ) ಪ್ರಕರಣ 165

ಇ) ಪ್ರಕರಣ 167

ಈ) ಪ್ರಕರಣ 168

ಪ್ರಕರಣ 167

89. ಜಿಲ್ಲಾ ಪಂಚಾಯತಿಗೆ ಆಯ್ಕೆಯಾದ ಸದಸ್ಯರುಗಳ ಹೆಸರನ್ನು ಯಾರಿಗೆ ವರದಿ ಮಾಡಬೇಕು?

ಅ) ಜಿಲ್ಲಾಧಿಕಾರಿ

ಆ) ರಾಜ್ಯಪಾಲರು

ಇ) ಸರ್ಕಾರ

ಈ) ಚುನಾವಣಾ ಆಯೋಘ

ಸರ್ಕಾರ

ಪ್ರಕರಣ 172 ರ ಪಕ್ರಾರ ಜಿಲ್ಲಾ ಪಂಚಾಯತಿಗೆ ಆಯ್ಕೆಯಾದ ಸದಸ್ಯರುಗಳ ಹೆಸರನ್ನು ಸರ್ಕಾರಕ್ಕೆ ವರದಿ ಮಾಡಬೇಕು ಹಾಗೂ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಆಗಬೇಕು.

90. ಯಾವ ಪ್ರಕರಣದಡಿ ದುರ್ನಡತೆ ಆಧಾರದ ಮೇಲೆ ಜಿಲ್ಲಾ ಪಂಚಾಯತಿ ಸದಸ್ಯರ ಸದಸ್ಯತ್ವವನ್ನು ರದ್ದು ಮಾಡಬಹುದು?

ಅ) ಪ್ರಕರಣ 174

ಆ) ಪ್ರಕರಣ 175

ಇ) ಪ್ರಕರಣ 179

ಈ) ಪ್ರಕರಣ 180

www.karunaduexams.com

ಪ್ರಕರಣ 175

ಪ್ರಕರಣ 175 ರಡಿ ಈ ಕೆಳಕಂಡ ಸಂದರ್ಭದಲ್ಲಿ ಸದಸ್ಯತ್ವವನ್ನು ರದ್ದುಮಾಡಬಹುದಾಗಿದೆ ಕರ್ತವ್ಯ ನಿರ್ವಹಿಸುವಾಗ ದುರ್ನಡತೆ ಅಥವಾ ತಲೆ ತಗ್ಗಿಸುವಂತಹ ತಪ್ಪು ಮಾಡಿದಾಗ, ಜಿಲ್ಲಾ ವೈದ್ಯಾಧಿಕಾರಿ ಪ್ರಮಾಣಿಕರಿಸಬಹುದಾದಂತೆ ಆ ಹುದ್ದೆಯನ್ನು ಹೊಂದಲು ವೈದ್ಯಕೀಯವಾಗಿ ಅನರ್ಹನಾದಾಗ, ನಾಲ್ಕು ಸಭೆಗಳಿಗೆ ಗೈರು ಹಾಜರಿಯಾದಾಗ, ಪಂಚಾಯತ್ ಕಾಮಗಾರಿಗಳಲ್ಲಿ ನೇರವಾಗಿ ಭಾಗಿಯಾದಾಗ (ಸೂಚನೆ: ಮೇಲಿನ ಎಲ್ಲವೂ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರಿಗು ಅನ್ವಯಿಸುತ್ತದೆ).

91. _______ ಪ್ರಕರಣದಡಿ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರು ಆಸ್ತಿ ಮತ್ತು ಹೊಣೆಗಾರಿಕೆ ಘೋಷಣೆ ಮಾಡಬೇಕು?

ಅ) ಪ್ರಕರಣ 175ಎ

ಆ) ಪ್ರಕರಣ 175ಬಿ

ಇ) ಪ್ರಕರಣ 176ಸಿ

ಈ) ಪ್ರಕರಣ 176ಬಿ

ಪ್ರಕರಣ 175ಎ

ಪ್ರಕರಣ 175ಎ ರಡಿ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರು ಆಸ್ತಿ ಮತ್ತು ಹೊಣೆಗಾರಿಕೆ ಘೋಷಣೆ ಮಾಡಬೇಕು.ಪ್ರಕರಣ 175ಬಿ ಯಡಿ ಘೋಷಣೆ ದಾಖಲು ಮಾಡದಿದ್ದರೆ ಅಥವಾ ಸುಳ್ಳು ಮಾಹಿತಿ ದಾಖಲು ಮಾಡಿದರೆ ಸದಸ್ಯತ್ವ ನಿಂತು ಹೋಗುತ್ತದೆ.

92. ಜಿಲ್ಲಾ ಪಂಚಾಯತಿಯ ರಚನೆಯ ಬಗ್ಗೆ ಈ ಪ್ರಕರಣದಡಿ ಉಲ್ಲೇಖಿಸಲಾಗಿದೆ?

ಅ) ಪ್ರಕರಣ 157

ಆ) ಪ್ರಕರಣ 159

ಇ) ಪ್ರಕರಣ 158

ಈ) ಪ್ರಕರಣ 145

ಪ್ರಕರಣ 159

93. ಸಿದ್ದಪ್ಪ ಎಂಬ ವ್ಯಕ್ತಿಯು ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸಿದ್ದು, ಆದರೆ ಆತನ ಕುಟುಂಬ ಶೌಚಾಲಯ ಹೊಂದಿರದ ಕಾರಣ ಆತನು ______?

ಅ) ಚುನಾವಣೆಗೆ ಸ್ಪರ್ಧಿಸುವಂತಿಲ್ಲ

ಆ) ಶೌಚಾಲಯ ನಿರ್ಮಿಸಿ ಚುನಾವಣೆಗೆ ಸ್ಪರ್ಧಿಸುವುದು

ಇ) ಆಯ್ಕೆಯಾದ ವರ್ಷದೊಳಗೆ ನಿರ್ಮಿಸುವೆ ಎಂದು ಮುಚ್ಚಳಕೆ ಬರೆದುಕೊಟ್ಟು ಸ್ಪರ್ಧಿಸುವುದು

www.karunaduexams.com

ಈ) ಶೌಚಾಲಯ ಹೊಂದಿರುವುದು ಕಡ್ಡಾಯವಲ್ಲ

ಆಯ್ಕೆಯಾದ ವರ್ಷದೊಳಗೆ ಶೌಚಾಲಯ ನಿರ್ಮಿಸುವೆ ಎಂದು ಮುಚ್ಚಳಿಕೆ ಬರೆದುಕೊಟ್ಟು ಸ್ಪರ್ಧಿಸುವುದು.ಆಯ್ಕೆಯಾದ ಮೇಲೆ ವರ್ಷದೊಳಗೆ ಕಡ್ಡಾಯವಾಗಿ ಶೌಚಾಲಯ ನಿರ್ಮಿಸಿಕೊಳ್ಳಬೇಕು.

94. ಜಿಲ್ಲಾ ಪಂಚಾಯತಿ ನಿಧಿಯ ಲೆಕ್ಕಪತ್ರಗಳನ್ನು ಪರಿಶೋಧನೆ ಮಾಡುವವರು ಯಾರು?

ಅ) ಸರ್ಕಾರ ನೇಮಿಸಲ್ಪಟ್ಟ ಲೆಕ್ಕಪರಿಶೋಧನಕರು

ಆ) ಕಂಟ್ರೋಲರ್ ಅಂಡ್ ಆಡಿಟರ್ ಜನರಲ್

ಇ) ಸ್ಥಳೀಯ ಲೆಕ್ಕಪರಿಶೋಧನೆ ವರ್ತುಲ

ಈ) ಜಿಲ್ಲಾ ಪಂಚಾಯತಿ ನೇಮಿಸಿದ ಸಿಎ ಸಂಸ್ಥೆ

ಕಂಟ್ರೋಲರ್ ಅಂಡ್ ಆಡಿಟರ್ ಜನರಲ್

95. ಜಿಲ್ಲಾ ಪಂಚಾಯತಿ ಸದಸ್ಯರು ಯಾರಿಗೆ ರಾಜೀನಾಮೆಯನ್ನು ನೀಡಬೇಕು?

ಅ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಆ) ಜಿಲ್ಲಾಧಿಕಾರಿ

ಇ) ಜಿಲ್ಲಾ ಪಂಚಾಯತ್ ಅಧ್ಯಕ್ಷ

ಈ) ಉಪವಿಭಾಗಧಿಕಾರಿ

ಜಿಲ್ಲಾ ಪಂಚಾಯತ್ ಅಧ್ಯಕ್ಷ

96. ಜಿಲ್ಲಾ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ದ ಅವಿಶ್ವಾಸ ನಿರ್ಣಯ ಮಂಡಿಸಲು ಅಗತ್ಯವಿರುವ ಕೋರಂ ಒಟ್ಟು ಸದಸ್ಯರ_______?

ಅ) ಮೂರನೇ ಒಂದರಷ್ಟು

ಆ) ಅರ್ಧದಷ್ಟು

ಇ) ಮೂರನೇ ಎರಡರಷ್ಟು

ಈ) ಮೂರನೆ ಎರಡರಷ್ಟು

ಮೂರನೇ ಎರಡರಷ್ಟು

ಜಿಲ್ಲಾ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ದ ಅವಿಶ್ವಾಸ ನಿರ್ಣಯ ಮಂಡಿಸಲು ಅರ್ಧದಷ್ಟು ಚುನಾಯಿತ ಸದಸ್ಯರು ನೋಟಿಸನ್ನು ನೀಡಿದ ತರುವಾಯ ಮತ್ತು ಒಟ್ಟು ಚುನಾಯಿತ ಸದಸ್ಯರ ಪೈಕಿ ಮೂರನೇ ಎರಡು ಭಾಗದಷ್ಟು ಬಹುಮತ ಅಥವಾ ಕೋರಂ ಇದ್ದರೆ ಮಾತ್ರ ಅವಿಶ್ವಾಸ ನಿರ್ಣಯ ಮನ್ನಣೆಯಾಗುತ್ತದೆ. ಅವಿಶ್ವಾಸ ನಿರ್ಣಯನವ್ನು ಆಯ್ಕೆಯಾದ ದಿನಾಂಕದಿಂದ ಮೂವತ್ತು ತಿಂಗಳೊಳಗೆ ಮಂಡಿಸತಕ್ಕದ್ದಲ್ಲ.

www.karunaduexams.com

97. ಜಿಲ್ಲಾ ಪಂಚಾಯತಿ ಅಧ್ಯಕ್ಷರ ಸ್ಥಾನ ಈ ಕೆಳಗಿನ ಯಾವ ಹುದ್ದೆಗೆ ಸಮನಾಗಿದೆ?

ಅ) ರಾಜ್ಯ ಸಭಾ ಸದಸ್ಯ

ಆ) ರಾಜ್ಯ ಸಚಿವರು

ಇ) ಲೋಕ ಸಭಾ ಸದಸ್ಯರು

ಈ) ರಾಜ್ಯ ವಿಧಾನಸಭಾ ಸ್ಪೀಕರ್

ರಾಜ್ಯ ಸಚಿವರು

ಪ್ರಸ್ತುತ ರಾಜ್ಯದ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನ ನೀಡಲಾಗಿದೆ.ಅದರಂತೆ ಅಧ್ಯಕ್ಷರು ಮಾಸಿಕ ವೇತನ ರೂ 35,000/- ಪಡೆಯಲಿದ್ದಾರೆ (ಸರ್ಕಾರ ಈ ಬಗ್ಗೆ ಈಗಾಗಲೇ ಆದೇಶ ಹೊರಡಿಸಿದೆ).

98. ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯ ನಡವಳಿ ಪುಸ್ತಕ ಯಾರ ಅಧೀನದಲ್ಲಿ ಇರತಕ್ಕದ್ದು?

ಅ) ಉಪಕಾರ್ಯದರ್ಶಿ

ಆ) ಸಹಾಯಕ ಕಾರ್ಯದರ್ಶಿ

ಇ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಈ) ಮುಖ್ಯಲೆಕ್ಕಾಧಿಕಾರಿ

ಮುಖ್ಯಕಾರ್ಯನಿರ್ವಾಹಣಾಧಿಕಾರಿ

99. ಈ ಕೆಳಗಿನ ಯಾವ ಅಧ್ಯಾಯ ಜಿಲ್ಲಾ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಿಗಳಿಗೆ ಸಂಬಂಧಿಸಿದೆ?

ಅ) ಅಧ್ಯಾಉ IX

ಆ) ಅಧ್ಯಾಯ XI

ಇ) ಅಧ್ಯಾಯ XII

ಈ) ಅಧ್ಯಾಯ XV

ಅಧ್ಯಾಯ XI

ಜಿಲ್ಲಾ ಪಂಚಾಯಿತಿ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳನ್ನು ಅಧ್ಯಾಯ XI ರಡಿ ವಿವರಿಸಲಾಗಿದೆ.

100. ಜಿಲ್ಲಾ ಪಂಚಾಯತಿಯಲ್ಲಿ ಕನಿಷ್ಠ ಎಷ್ಟು ತಿಂಗಳಿಗೊಮ್ಮೆ ಸಾಮಾನ್ಯ ಸಭೆಯನ್ನು ಆಯೋಜಿಸತಕ್ಕದ್ದು?

ಅ) ಒಂದು

ಆ) ಎರಡು

www.karunaduexams.com

ಇ) ಮೂರು

ಈ) ನಾಲ್ಕು

ಎರಡು

ಜಿಲ್ಲಾ ಪಂಚಾಯತಿಯ ಕಾರ್ಯಕಲಾಪ ಸಭೆಯನ್ನು ಕನಿಷ್ಠ ಪಕ್ಷ ಎರಡು ತಿಂಗಳಲ್ಲಿ ಒಂದು ಬಾರಿ ನಡೆಸತಕ್ಕದ್ದು.ಜಿಲ್ಲಾ ಪಂಚಾಯತಿ ಪ್ರಥಮ ಸಭೆಯ ದಿನಾಂಕವನ್ನು ಅದರ ಮೊದಲ ರಚನೆಯ ಅಥವಾ ಪುನರ್ ರಚನೆಯ ತರುವಾಯ ಕಮೀಷನರ್ ಅವರು ನಿಗದಿಪಡಿಸತಕ್ಕದ್ದು.ಜಿಲ್ಲಾ ಪಂಚಾಯತಿಯ ಒಟ್ಟು ಸಂಖ್ಯೆಯ ಅರ್ಧದಷ್ಟು ಸದಸ್ಯರ ಸಂಖ್ಯೆ ಸಭೆಯ ಕೋರಂ ಆಗಿರುತ್ತದೆ.

www.karunaduexams.com